ಸಂಪುಟ : 8 ಸಂಚಿಕೆ :290 ಪುಟ : 4 ಬೆಲೆ : 3.00 ಶುಕ್ರವಾರ ಡಿಸೆಂಬರ್ 29, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ

Volume : 8 Issue : 290 Pages : 4 Price : 3.00 Friday December 29, 2023 Gadag RNI No:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

ಇಂದಿನ ನೀರು ಪೂರೈಕೆ ವಿವರ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ಡಿಸೆಂಬರ್ 29 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

ಸ್ಥಳಗಳ ವಿವರ : ವಾರ್ಡ್ ನಂ. 15, 16, 17 ಶಹಾಪುರ ಪೇಟೆ, ಜವಳಗಲ್ಲಿ, ಮೀನಿನ ಮಾರ್ಕೆಟ್, ಡಿಸಿ ಮಿಲ್ ರೋಡ್, ಕರ್ನಾಟಕ ಟಾಕೀಸ್ ರೋಡ್, ಮಹೇಂದ್ರಕರ್ ಸರ್ಕಲ್ ಲೈನ್, ಗಾಂಧಿ ಸರ್ಕಲ್ ರೋಡ್, ಶುದ್ಧ ಕುಡಿಯುವ ನೀರಿನ ಘಟಕದ ಸುತ್ತಮುತ್ತಲಿನ ಲೈನ್‌ಗಳು, ಬಸವೇಶ್ವರ ಗುಡಿ ಲೈನ್, ಗಣೇಶ ಗುಡಿ ಲೈನ್ ಕೆಲವು ಉಳಿದ ಭಾಗಗಳು.

ವಾರ್ಡ್ ನಂ. 21, 22, 23 ರಾಚೋಟೇಶ್ವರ ಮುಂದಿನ ಭಾಗ, ಶರಣಪ್ಪರ ಲೈನ್, ಪಾಟೀಲರ ಲೈನ್, ನಾಗಪ್ಪನ ಕಟ್ಟಿ, ಈಟಿಯವರ ಲೈನ್, ಅಂಗನವಾಡಿ ಲೈನ್, ಶಾಂತವನ ಅಡ್ಡೆದ ಲೈನ್ ಭಾಗ –1,2, ಗೆಳೆಯರ ಬಳಗ, ಮಾನ್ವಿ ಅವರ ಲೈನ್, ಲಕ್ಕುಂಡಿ ಅವರ ಲೈನ್, ಗಣಪತಿ ಗುಡಿ. ವಾರ್ಡ್ ನಂ. 30, 34 ವಡ್ಡರಗೇರಿ, ಕುಂಚಿ ಕೊರವರ ಓಣಿ, ಮೂರುಶಿಳ್ಳಿನ ವಕಾರ, ಡಿಪೋ ಹಿಂದಿನ ಭಾಗ, ಗಾರ್ಡನ್ ಲೈನ್, ಒಂದನೇ ಕ್ರಾಸ್, ಬಸವೇಶ್ವರ ಶಾಲೆಯ ಹಿಂದಿನ ಭಾಗಗಳು, ಮಸೀದಿ ಲೈನ್. ವಾರ್ಡ್ ನಂ. 8,9 ಹೆಲ್ತ್ ಕ್ಯಾಂಪ್ ಕಬಾಡೆ ಲೈನ್, ತೆಂಗಿನ ಪ್ಲಾಟ್, ಕುರಟ್ಟಿ ಪೇಟೆ ಲೈನ್ ಕೆಲವು ಉಳಿದ ಭಾಗಗಳು.

ಈಗಾಗಲೇ ಕುಡಿಯುವ ನೀರಿನ ನಳ ಹೊಂದಿರುವ ಬಾಕಿದಾರರ ಪಟ್ಟಿ ತಯಾರಿಸಿದ್ದು, ನಾಗರಿಕರು ಕೂಡಲೇ ತಮ್ಮ ಕುಡಿಯುವ ನೀರಿನ ಬಾಕಿ ಕರವನ್ನು ಸಂದಾಯ ಮಾಡುವಂತೆ ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾಗಲಕೋಟೆಗೆ ಇಂದು ಕಾನೂನು ಸಚಿವ ಪಾಟೀಲ

■ ವಿಜಯಸಾಕ್ಷಿ ಸುದ್ದಿ, ಗದಗ



ರಾಜ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರ, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಇಲಾಖೆ ಸಚಿವರಾದ ಡಾ.ಎಚ್.ಕೆ.ಪಾಟೀಲ ಅವರು ಡಿ. 29 ರಂದು ಮುಂಜಾನೆ 8.30 ಗಂಟೆಗೆ ರಸ್ತೆಯ ಮೂಲಕ ಬಾಗಲಕೋಟೆಗೆ ಪ್ರಯಾಣ ಬೆಳೆಸುವರು. ಮುಂಜಾನೆ 10.30 ಗಂಟೆಗೆ ಬಾಗಲಕೋಟೆ ನವನಗರದ ಆರ್.ಟಿ.ಓ ಕಚೇರಿ ಹತ್ತಿರ ಮಹಾಸಾದ್ವಿ ಹೇಮರಡ್ಡಿ ಮಲ್ಲಮ್ಮ ಹಾಗೂ ಮಹಾಯೋಗಿ ವೇಮನರ ದೇವಸ್ಥಾನ, ವಿದ್ಯಾರ್ಥಿ ನಿಲಯ ಮತ್ತು ಗ್ರಂಥಾಲಯ ಕಟ್ಟಡದ ಭೂಮಿ ಪೂಜೆ ನೆರವೇರಿಸುವರು. ಮಧ್ಯಾಹ್ನ 3 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಚಾಲುಕ್ಯ ಅಭಿವೃದ್ಧಿ ಪ್ರಾಧಿಕಾರದ ಸಭೆಯಲ್ಲಿ ಪಾಲ್ಗೊಳ್ಳುವರು. ಸಾಯಂಕಾಲ 6.30 ಗಂಟೆಗೆ ರಸ್ತೆಯ ಮೂಲಕ ಗದಗಿಗೆ ಆಗಮಿಸುವರು. ಸಾಯಂಕಾಲ 7 ಗಂಟೆಗೆ ಗದಗ ಕಾಟನ ಸೇಲ್ ಸೊಸೈಟಿ ಆವರಣದಲ್ಲಿ ಅಯ್ಯಪ್ಪ ಸ್ವಾಮಿ ಮಹಾಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಗದಗನಲ್ಲಿ ವಾಸ್ತವ್ಯ ಮಾಡುವರು.

ನೃತ್ಯ ಸಂಭ್ರಮ ಕಾರ್ಯಕ್ರಮ ಇಂದು

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ವೇದಿಕಾ ನೃತ್ಯ ಶಾಲೆಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಡಿ.29ರ ಸಂಜೆ 5 ಗಂಟೆಗೆ ರಂಭಾಪುರಿ ಜ.ವೀರಗಂಗಾಧರ ಸಮುದಾಯ ಭವನದಲ್ಲಿ ನೃತ್ಯ ಸಂಭ್ರಮ ಕಾರ್ಯಕ್ರಮ ನಡೆಯಲಿದೆ. ಮಹದೇವಪ್ಪ ಚಕ್ರಸಾಲಿ ಅಧ್ಯಕ್ಷತೆ ವಹಿಸುವರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಿಲ್ಲಾ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ.ಬಿ ಉದ್ಘಾಟಿಸುವರು. ಶಾಸಕ ಡಾ. ಚಂದ್ರು ಲಮಾಣಿ, ಸಿಪಿಐ ನಾಗರಾಜ ಮಾಡಳ್ಳಿ, ಶಶಿಧರ ರೊಳ್ಳಿ, ಸುನೀಲ ಮಹಾಂತಶೆಟ್ಟರ, ಎಚ್.ಎಸ್. ಕಿರಣ ಆಗಮಿಸುವರು. ಕಾರ್ಯಕ್ರಮದಲ್ಲಿ ವಿದೂಷಿ ಡಾ. ಹೇಮಾ ವಾಘಮೋಡೆ ಮತ್ತು ಮುಖ್ಯ ಶಿಕ್ಷಕ ಅರವಿಂದ ದೇಶಪಾಂಡೆ ಅವರಿಗೆ ಗುರುವಂದನೆ ನಡೆಯಲಿದೆ ಎಂದು ನೃತ್ಯ ಶಾಲೆಯ ಕಾರ್ಯದರ್ಶಿ ಸರೋಜಾ ಗೌಡರ ತಿಳಿಸಿದ್ದಾರೆ.

ಫಲಾನುಭವಿಗಳಿಗೆ ನಿವೇಶನ ಹಂಚಿಕೆ ಮಾಡಲು ಗ್ರಾಮ ಸಭೆಯಲ್ಲಿ ಅಂತಿಮ ಮುದ್ರೆ

ನಿವೇಶನದ ಮೇಲಿದ್ದ ಪ್ರಕರಣಗಳ ಇತ್ಯರ್ಥ

■ ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ

ಕಳೆದ 20 ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಹಾಗೂ 5 ವರ್ಷಗಳಿಂದ ನಿವೇಶನ ಹಾಗೂ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಮೇಲೆ ಇದ್ದ ಹಲವು ನ್ಯಾಯಾಲಯದ ಪ್ರಕರಣಗಳು ಇತ್ಯರ್ಥಗೊಂಡಿದ್ದು, ಗ್ರಾಮ ಸಭೆಯಲ್ಲಿ ಆಯ್ಕೆಯಾದ 174 ಫಲಾನುಭವಿಗಳಿಗೆ ನಿವೇಶನವನ್ನು ಹಂಚಿಕೆ ಮಾಡಲು ಗುರುವಾರ ನಡೆದ ಗ್ರಾಮಸಭೆಯಲ್ಲಿ ತೀರ್ಮಾನಿಸಲಾಯಿತು.

ಈ ಕುರಿತು ವಿವರಣೆ ನೀಡಿದ ಕಾರ್ಯದರ್ಶಿ ಪ್ರದೀಪ ಆಲೂರ, ಕಳೆದ 5 ವರ್ಷಗಳಿಂದ ನಿವೇಶನ ಮತ್ತು ಫಲಾನುಭವಿಗಳ ಮೇಲಿದ್ದ ನ್ಯಾಯಾಲಯದ ಪ್ರಕರಣಗಳು ಪಂಚಾಯಿತಿ ಪರವಾಗಿ ನಿರ್ಣಯವಾಗಿ ಇತ್ಯರ್ಥಗೊಂಡಿವೆ. ಗ್ರಾಮ ಸಭೆಯಲ್ಲಿ ಆಯ್ಕೆಯಾಗಿದ್ದವರಲ್ಲಿ ಕುಂಬಾರೇಶ್ವರ ದೇಗುಲದ ಭೂ ಸ್ವಾಧಿನಕ್ಕೆ ಒಳಪಟ್ಟ 27 ಕುಟುಂಬಗಳು ಸೇರಿದಂತೆ ಗ್ರಾಮದ ಇತರೆ ಫಲಾನುಭವಿಗಳಲ್ಲಿ ಕೆಲವರು ಪೋತಿಯಾಗಿದ್ದರ ಕಾರಣ ತಾಂತ್ರಿಕ ದೋಷದಿಂದ ನಿವೇಶನ ಹಂಚಿಕೆ ಮುಂದೂಡುತ್ತಾ ಬರಲಾಗಿತ್ತು. ಇದಕ್ಕೆ ಅವರ ಸಂಬಂಧಿಕರನ್ನು ಸೇರ್ಪಡೆ ಮಾಡಲು ಸಭೆ ಒಪ್ಪಿಗೆ ನೀಡಬೇಕು ಎಂದು ವಿನಂತಿಸಿಕೊಂಡರು.

ಈ ಸಂದರ್ಭದಲ್ಲಿ ಮಾತನಾಡಿದ ಬಸವರಾಜ ಮುಳ್ಳಾಳ, ಪೋತಿಯಾದವರ ಸಂಬಂಧಿಕರನ್ನು ಸೇರ್ಪಡೆ ಮಾಡಿ ಗ್ರಾಮ ಸಭೆಯಲ್ಲಿ ಆಯ್ಕೆಯಾದ ಎಲ್ಲ ಫಲಾನುಭವಿಗಳಿಗೆ ಶೀಘ್ರವೇ ನಿವೇಶನ ಹಂಚಿಕೆ ಮಾಡಬೇಕು. ಮೊದಲು ನಿವೇಶನಕ್ಕೆ ಮೂಲಭೂತ ಸೌಲಭ್ಯವನ್ನು ಕಲ್ಪಿಸಬೇಕು. 7 ಎಕರೆ ನಿವೇಶನ ಹಂಚಿಕೆಯ ವಿಷಯ ಈ ಗ್ರಾಮ ಸಭೆಯಲ್ಲಿ ಅಂತಿಮಗೊಳಿಸಬೇಕು ಎಂದು ಒತ್ತಾಯಿಸಿದರು.

▸▸ ಇನೇ ಪುಟಕ್ಕೆ

ಕಸ ವಿಲೇವಾರಿ ಹಸ್ತಾಂತರಿಸಿ

ಗ್ರಾಮದಲ್ಲಿರುವ ಮಹಿಳಾ ಸಂಜೀವಿನಿ ಒಕ್ಕೂಟದ ಮಹಿಳೆಯರು ಕಸ ವಿಲೇವಾರಿ ಮಾಡಲು ತರಬೇತಿ ಪಡೆದಿದ್ದು, ವಾಹನ ಖರೀದಿಸಿ ಒಕ್ಕೂಟಕ್ಕೆ ಹಸ್ತಾಂತರಿಸಬೇಕು. ಒಕ್ಕೂಟವು 196 ಸಂಘಗಳಿಗೆ ಸಮುದಾಯ ಬಂಡವಾಳ ನಿಧಿ ಒದಗಿಸಿ ಉದ್ಯೋಗ ಒದಗಿಸಿದೆ. ಮಹಿಳೆಯರಿಗೆ ಸರಕಾರ ಹಲವಾರು ತರಬೇತಿ ನೀಡುತ್ತಿದೆ. ನಮಗೆ ಕಟ್ಟಡದ ಕೊರತೆಯಿದ್ದು, ಗ್ರಾ.ಪಂ ಒದಗಿಸಿಕೊಡಬೇಕು ಎಂದು ಒಕ್ಕೂಟದ ಎಂ.ಬಿ.ಕೆ ಚಂದ್ರಕಲಾ ಮಾಡಲಗೇರಿ ಒತ್ತಾಯಿಸಿದರು.

ವಸತಿ ಸಚಿವರಿಂದ ವಿತರಣೆ

174 ಫಲಾನುಭವಿಗಳಲ್ಲಿ ಈಗಾಗಲೇ ಕ್ಷೇತ್ರದ ಶಾಸಕರು 93 ಜನರಿಗೆ ಹಕ್ಕು ಪತ್ರ ವಿತರಿಸಿದ್ದಾರೆ. ಉಳಿದ 38 ಹಕ್ಕು ಪತ್ರಗಳು ಸಿದ್ಧವಾಗಿವೆ. ಸೂಕ್ತ ದಾಖಲಾತಿಗಳೊಂದಿಗೆ ಇನ್ನುಳಿದ ಫಲಾನುಭವಿಗಳಿಗೆ ನಿವೇಶನವನ್ನು ವಿತರಿಸಲು ವಸತಿ ಸಚಿವರು, ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ನರಗುಂದ ಕ್ಷೇತ್ರದ ಶಾಸಕರನ್ನು ಆಹ್ವಾನಿಸಿ ವಿತರಿಸುವ ಉದ್ದೇಶವಿದೆ. 7 ಎಕರೆ ನಿವೇಶನಕ್ಕೆ ಮೂಲಭೂತ ಸೌಲಭ್ಯ ಒದಗಿಸಲು ಕ್ರಿಯಾ ಯೋಜನೆ ರೂಪಿಸಲಾಗಿದೆ.

800ಕ್ಕೂ ಹೆಚ್ಚು ವಸತಿ ರಹಿತರ ಪಟ್ಟಿಯಿದ್ದು, ಅರ್ಹರನ್ನು ಗುರುತಿಸಿ ಜಮೀನ ಖರೀದಿಗೆ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು. ಮುಂದಿನ ದಿನಗಳಲ್ಲಿ ನಿಗದಿತ ಸಮಯಕ್ಕೆ ಸಭೆಗಳನ್ನು ನಡೆಸಿ ಗ್ರಾಮದ ಅಭಿವೃದ್ಧಿಗೆ ಶ್ರಮಿಸಲಾಗುವುದು ಎಂದು ಗ್ರಾ.ಪಂ ಅಧ್ಯಕ್ಷ ಕೆ.ಎಸ್. ಪೂಜಾರ ಹೇಳಿದರು.

ರಾಷ್ಟ್ರೀಯ ಗ್ರಾಹಕರ ದಿನಾಚರಣೆ ಕಾರ್ಯಕ್ರಮದಲ್ಲಿ ಜಿಲ್ಲಾ ಸತ್ರ ನ್ಯಾ. ಬಸವರಾಜ

ಸಂಪೂರ್ಣ ಮಾಹಿತಿಯೊಂದಿಗೆ ವ್ಯವಹರಿಸಿ

■ ವಿಜಯಸಾಕ್ಷಿ ಸುದ್ದಿ, ಗದಗ

ಗ್ರಾಹಕರ ಹಕ್ಕು ಮತ್ತು ಜವಾಬ್ದಾರಿಗಳ ಕುರಿತು ಅರಿವು ಮೂಡಿಸುವುದೇ ರಾಷ್ಟ್ರೀಯ ಗ್ರಾಹಕರ ದಿನಾಚರಣೆಯ ಪ್ರಮುಖ ಉದ್ದೇಶವಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಧೀಶರಾದ ಬಸವರಾಜ ಹೇಳಿದರು.

ಗುರುವಾರ ನಗರದ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ನಲ್ಲಿ ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಕಾನೂನು ಮಾಪನ ಶಾಸ್ತ್ರ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇವರುಗಳ ಸಂಯುಕ್ತ ಆಶ್ರಯದಲ್ಲಿ 'ಇ–ಕಾಮರ್ಸ್ ಮತ್ತು ಡಿಜಿಟಲ್ ವ್ಯಾಪಾರದ ಯುಗದಲ್ಲಿ ಗ್ರಾಹಕರ ರಕ್ಷಣೆ' ಎಂಬ ಘೋಷವಾಕ್ಯದಡಿ ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರೀಯ ಗ್ರಾಹಕರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಖರೀದಿಗೂ ಮುನ್ನ ತೂಕ, ಅಳತೆ, ಗುಣಮಟ್ಟ, ಅವಧಿ ಎಲ್ಲವನ್ನೂ ಪರಿಶೀಲಿಸಿ ವಸ್ತುವನ್ನು ಖರೀದಿಸಬೇಕಾಗುತ್ತದೆ. ಮತ್ತು ಖರೀದಿಸಿದ ವಸ್ತುವಿನ ಬಿಲ್ ಪಡೆಯುವುದು ಮುಖ್ಯವಾಗಿದೆ. ಗ್ರಾಹಕರಿಗೆ ತಾವು ಖರೀದಿಸಿದ ವಸ್ತುವಿನ ಗುಣಮಟ್ಟದಲ್ಲಿ ದೋಷ ಕಂಡುಬಂದರೆ ಅಥವಾ ಸೇವೆಯಲ್ಲಿ ನ್ಯೂನತೆ ಕಂಡು ಬಂದರೆ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಕ್ಕೆ ದೂರು ಸಲ್ಲಿಸಿ ಪರಿಹಾರ ಕಂಡುಕೊಳ್ಳಬಹುದಾಗಿದೆ ಎಂದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಕೆ. ಗುರುಪ್ರಸಾದ ಮಾತನಾಡಿ, ಗ್ರಾಹಕರ ರಕ್ಷಣಾ ಕಾಯ್ದೆಯು 1986ರಲ್ಲಿ ಜಾರಿಗೆ ಬಂದಿತು.

▸▸ ಇನೇ ಪುಟಕ್ಕೆ

> ಸಮಾಜದ ಕಟ್ಟಕಡೆಯ ವ್ಯಕ್ತಿಯಿಂದ ಹಿಡಿದು ರಾಷ್ಟ್ರಪತಿಯವರೆಗೆ ಎಲ್ಲರೂ ಒಂದಿಲ್ಲೊಂದು ರೀತಿಯಲ್ಲಿ ಗ್ರಾಹಕರಾಗಿರುತ್ತಾರೆ. ವಸ್ತುಗಳನ್ನು ಖರೀದಿಸುವ ಅಥವಾ ಸೇವೆಯನ್ನು ಪಡೆಯುವ ವ್ಯಕ್ತಿಗಳು ಗ್ರಾಹಕರಾಗಿದ್ದಾರೆ. ಇತ್ತೀಚಿನ ಕೆಲವು ವರ್ಷಗಳಲ್ಲಿ ಜನಸಾಮಾನ್ಯರು ಹೆಚ್ಚಾಗಿ ಇ–ಕಾಮರ್ಸ್ ಮತ್ತು ಆನ್‌ಲೈನ್ ಮೂಲಕ ವಸ್ತುಗಳ ಖರೀದಿ ಹಾಗೂ ಸೇವೆ ಪಡೆಯುತ್ತಿದ್ದಾರೆ. ಗ್ರಾಹಕರಿಗೆ ತಾವು ಕೊಳ್ಳುವ ವಸ್ತುವಿನ ಗುಣಮಟ್ಟ, ತೂಕ ಪರಿಶೀಲನೆ ಮಾಡಿ ಆಯ್ಕೆ ಮಾಡಿಕೊಳ್ಳುವ ಹಕ್ಕು ಇರುತ್ತದೆ. ಈ ಸಂದರ್ಭದಲ್ಲಿ ಹೆಚ್ಚಿನ ಮುಂಜಾಗ್ರತೆ ವಹಿಸಿ ಸಂಪೂರ್ಣ ಮಾಹಿತಿಯೊಂದಿಗೆ ವ್ಯವಹರಿಸಬೇಕಾಗುತ್ತದೆ.
>
> – ಬಸವರಾಜ.
> ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಧೀಶರು.

> ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷ ರಾಚಪ್ಪ ತಾಳಿಕೋಟಿ ಮಾತನಾಡಿ, ಯಾವುದೇ ವಸ್ತುವನ್ನು ಖರೀದಿಸಿದಾಗ ರಸೀದಿ ಪಡೆಯುವುದು ಮುಖ್ಯವಾಗಿದೆ. ಒಂದು ವೇಳೆ ವಸ್ತುವು ಕಳಪೆ ಗುಣಮಟ್ಟದ್ದು ಎಂದು ಕಂಡು ಬಂದರೆ ಖರೀದಿಸಿದಾಗಿನ ಅಗತ್ಯ ದಾಖಲಾತಿಗಳನ್ನು ಒದಗಿಸಿ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಿಂದ ಪರಿಹಾರ ಕಂಡುಕೊಳ್ಳಬಹುದಾಗಿದೆ ಎಂದರು ತಿಳಿಸಿದರು.

ಕನ್ನಡಪರ ಹೋರಾಟಗಾರರು ಲೂಟಿ, ದರೋಡೆ ಮಾಡಿಲ್ಲ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಕನ್ನಡ ನಾಮಫಲಕ ಕಡ್ಡಾಯಕ್ಕೆ ಆಗ್ರಹಿಸಿ ಹೋರಾಟ ಮಾಡಿದಕ್ಕೆ ಬಂಧನಕ್ಕೊಳಗಾಗಿರುವ ಕರವೇ ರಾಜ್ಯಾಧ್ಯಕ್ಷ ನಾರಾಯಣಗೌಡ ಮತ್ತು ಕರವೇ ಕಾರ್ಯಕರ್ತರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಕರವೇ ಕಾರ್ಯಕರ್ತರು ಗುರುವಾರ ಮುಖ್ಯಮಂತ್ರಿಗಳಿಗೆ ಬರೆದ ಮನವಿ ಪತ್ರವನ್ನು ತಹಸೀಲ್ದಾರರಿಗೆ ಸಲ್ಲಿಸಿದರು.

ಈ ವೇಳೆ ಮಾತನಾಡಿದ ಕರವೇ ತಾಲೂಕಾಧ್ಯಕ್ಷ ಲೋಕೇಶ ಸುತಾರ, ಕರ್ನಾಟಕದಲ್ಲಿ ನಾಮಫಲಕಗಳು ಕನ್ನಡದಲ್ಲಿರಬೇಕೆಂದು ಆಗ್ರಹಿಸಿ ಹೋರಾಟ ಮಾಡಿದ ಕರವೇ ರಾಜ್ಯಾಧ್ಯಕ್ಷ ನಾರಾಯಣಗೌಡ ಮತ್ತು ಕನ್ನಡದ ಸಹೋದದರನ್ನು ಬಂಧಿಸಿರುವುದು ಖಂಡನೀಯ. ಕನ್ನಡ ಹೋರಾಟಗಾರರೇನು ಲೂಟಿ, ದರೋಡೆ, ಕೊಲೆ ಮಾಡಿಲ್ಲ, ಕನ್ನಡಕ್ಕೋಸ್ಕರ ಹೋರಾಟ ಮಾಡಿದ್ದಾರೆ. ಸರ್ಕಾರದ ನಿರ್ಲಕ್ಷ್ಯ ಮತ್ತು ಹೊಣೆಗೇಡಿತನದ ವಿರುದ್ಧ ಕನ್ನಡಪರ ಹೋರಾಟಗಾರರು ಪ್ರತಿಭಟನೆ ಮಾಡಿದರೆ ಅವರನ್ನು ಜೈಲಿಗಟ್ಟುವ ಕೆಲಸ ಮಾಡಲಾಗುತ್ತಿದೆ. ಇದು ಖಂಡನೀಯ ಎಂದರು.

ಈ ಸಂದರ್ಭದಲ್ಲಿ ಕರವೇ ಮುಖಂಡರಾದ ಬಸವರಾಜ ಹೊಗೆಸೊಪ್ಪಿನ, ಪ್ರಕಾಶ ಕೊಂಚಿಗೇರಿ ಮಠ, ಗಂಗಾಧರ ಕೊಂಚಿಗೇರಿಮಠ, ಗಣೇಶ ಮೇಹರವಾಡೆ, ಮೈನು ಮನಿಯಾರ್, ಅರುಣ ಮೆಕ್ಕಿ, ಜಹೀರ್ ಮೋಮಿನ್, ಪ್ರವೀಣ ಗೌರಿ, ಹುಲಿಗೆಮ್ಮ ಮೇವುಂಡಿ, ಮಂಜುಳಾ ಹೊನ್ನಣ್ಣನವರ, ಶೇಖವ್ವ ಗೋಡಿ, ಶೈಲಾ ಅಂಗಡಿ, ಜಯಶ್ರೀ ತುಪ್ಪದ, ಪ್ರವೀಣ ಗಾಣಿಗೇರ, ಸಾವಿತ್ರಿ ಅತ್ತಿಗೇರಿ, ಬಸವರಾಜ ಅಂಗಡಿ, ಆಸೀಫ್ ಗುತ್ತಲ ಸೇರಿ ಕಾರ್ಯಕರ್ತರನೇಕರಿದ್ದರು. ತಹಸೀಲ್ದಾರ ವಾಸುದೇವ ಸ್ವಾಮಿ ಮನವಿ ಸ್ವೀಕರಿಸಿದರು.

ಕುಡಿಯುವ ನೀರಿನ ಕೆರೆ ನಿರ್ಮಾಣದ ಸ್ಥಳ ಪರಿಶೀಲಿಸಿದ ಸಚಿವ ಪಾಟೀಲ

■ ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರ, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಇಲಾಖೆ ಸಚಿವರಾದ ಡಾ.ಎಚ್. ಕೆ.ಪಾಟೀಲ ಅವರು ಗುರುವಾರ ಸಾಯಂಕಾಲ ಪಾಪನಾಶಿ ಹತ್ತಿರದ ನಿಯೋಜಿತ ಕುಡಿಯುವ ನೀರಿನ ಕೆರೆ ನಿರ್ಮಾಣದ ಸ್ಥಳ ಪರಿಶೀಲನೆ ನಡೆಸಿದರು.

ಗದಗ–ಬೆಟಗೇರಿ ಅವಳಿ ನಗರಕ್ಕೆ ಸಮರ್ಪಕ ಕುಡಿಯುವ ನೀರು ಒದಗಿಸುವ ಉದ್ದೇಶದಿಂದ ಬೃಹತ್ ಕೆರೆ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ. ಇದರಿಂದ ಅವಳಿ ನಗರದ ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ದೊರಕಲಿದೆ. ಕೆರೆ ನಿರ್ಮಾಣ ಮಾಡಿ ತುಂಗಭದ್ರಾ ನದಿಯ ನೀರನ್ನು ಕೆರೆಗೆ ತುಂಬಿಸಿ ಅದರಿಂದ ಅವಳಿ ನಗರಕ್ಕೆ ನೀರು ನೀಡುವ ಯೋಜನೆ ಇದಾಗಿದೆ. ಇದನ್ನು ಗುರುವಾರ ಜಿಲ್ಲಾ ಉಸ್ತುವಾರಿ ಸಚಿವರು ಸ್ಥಳ ಪರಿಶೀಲಿಸಿ ಅಧಿಕಾರಿಗಳಿಗೆ ಅಗತ್ಯ ಸೂಚನೆಗಳನ್ನು ನೀಡಿದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ, ಉಪ ವಿಭಾಗಾಧಿಕಾರಿ ಡಾ.ವೆಂಕಟೇಶ ನಾಯ್ಕ, ತಹಸೀಲ್ದಾರ ಶ್ರೀನಿವಾಸಮೂರ್ತಿ ಕುಲಕರ್ಣಿ, ಗದಗ–ಬೆಟಗೇರಿ ನಗರಸಭೆ ಪೌರಾಯುಕ್ತ ಗಂಗಪ್ಪ ಎಂ., ಸಹಾಯಕ ಕಾರ್ಯಪಾಲಕ ಅಭಿಯಂತರ ಎಚ್.ಎಸ್.ಬಂಡಿವಡ

ಸಾಕ್ಷಿ ಸುಭಾಷಿತ

ತಾಯಿ ಎಂಬುದು ಮಕ್ಕಳ ಹೃದಯಲ್ಲೂ,
ತುಟಿಯ ಮೇಲೂ ಇರುವ ದೇವರ ಹೆಸರು.
–ಸುಭಾಷಿತ

ಸಂಪಾದಕೀಯ

ಸರಕಾರಕ್ಕೆ ಮತ್ತೊಮ್ಮೆ ಕೋರ್ಟ್ ಚಾಟಿ

ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದು ಆರು ತಿಂಗಳು ಕಳೆದಿದೆ. ಪ್ರಮುಖ 4 ಗ್ಯಾರಂಟಿಗಳನ್ನು ಈಡೇರಿಸಿ ಈಗ 5ನೆ ಗ್ಯಾರಂಟಿ ಜಾರಿಗೆ ಮುಂದಾಗಿದೆ. ಹೀಗಾಗಿ ಸರಕಾರ ಇನ್ನೂ ಗ್ಯಾರಂಟಿ ಮೂಡ್ ನಲ್ಲಿಯೇ ಇದೆ.

ಗ್ಯಾರಂಟಿ ಮೂಡ್ ಬಳಸಿಕೊಂಡು ಪಂಚರಾಜ್ಯ ಚುನಾವಣೆಯನ್ನು ಎದುರಿಸಿದ್ದು ಆಯಿತು. ತೆಲಂಗಾಣ ಹೊರತುಪಡಿಸಿ ಇನ್ನುಳಿದ ರಾಜ್ಯಗಳಲ್ಲಿ ಕಾಂಗ್ರೆಸ್ ಮುಖಭಂಗ ಅನುಭವಿಸಿದ್ದು ಆಯಿತು. ಇನ್ನಾದರೂ ಆಡಳಿತ ಯಂತ್ರ ಚುರುಕುಗೊಳ್ಳಬೇಕಾಗಿದೆ.

ರಾಜ್ಯ ಸರಕಾರ ತನ್ನ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುತ್ತಿಲ್ಲ ಎನ್ನುವುದು ಪ್ರತಿಪಕ್ಷಗಳ ಆರೋಪ ಮಾತ್ರವಲ್ಲ, ಕೋರ್ಟ್ ಸಹ ಇದನ್ನೆ ಹೇಳುತ್ತಿದೆ. ರಾಜ್ಯದ ಅನೇಕ ಗಂಭೀರ ಸಮಸ್ಯೆಗಳ ಕುರಿತಾಗಿ ಹೈಕೋರ್ಟ್ ಅನೇಕ ಬಾರಿ ರಾಜ್ಯ ಸರಕಾರಕ್ಕೆ ಛೀಮಾರಿ ಹಾಕಿದೆ, ಸೂಚನೆಯನ್ನೂ ನೀಡಿದೆ. ಆದರೂ ಸರಕಾರ ಕೋರ್ಟ್ ಸೂಚನೆಯನ್ನೂ ಪಾಲಿಸದಿರುವ ಅನೇಕ ಉದಾಹರಣೆಗಳು ಕಣ್ಣ ಮುಂದಿವೆ.

ಸದ್ಯ ಅಂಥದ್ದೆ ಮತ್ತೊಂದು ಸಮಸ್ಯೆ ಎಂದರೆ ಗುಜರಿ ಬಸ್ಸುಗಳು. ಶಕ್ತಿ ಯೋಜನೆ ಜಾರಿಯಾದಾಗಿನಿಂದ ಮಹಿಳೆಯರ ಪ್ರಯಾಣದ ಪ್ರಮಾಣ ಏರಿಕೆಯಾಗಿದೆ. ಅದರಲ್ಲೂ ಧಾರ್ಮಿಕ ಶ್ರದ್ಧಾ ಕೇಂದ್ರಗಳಿಗೆ ಭೇಟಿ ನೀಡುವವರ ಸಂಖ್ಯೆ ದ್ವಿಗುಣಗೊಂಡಿದೆ. ಇದರಿಂದ ಧಾರ್ಮಿಕ ಕೇಂದ್ರಗಳ ಆದಾಯ ಮತ್ತು ಸಾರಿಗೆ ಸಂಸ್ಥೆಯ ಆದಾಯ ಹೆಚ್ಚಾಗಿದೆ. ಆದರೆ ಬಸ್ಸುಗಳ ಸ್ಥಿತಿಗತಿ ನೋಡಿದರೆ ಯಾವುದೇ ಬಸ್ಸಿನಲ್ಲೂ ಶಕ್ತಿ ಇಲ್ಲ ಎನ್ನುವುದು ಸ್ಪಷ್ಟವಾಗುತ್ತಿದೆ.

ನಿಗದಿತ ಕಿಲೋ ಮೀಟರ್ ಸಂಚರಿಸಿದ ಬಸ್ಸುಗಳನ್ನು ಸಾರಿಗೆ ಸಂಸ್ಥೆ ಗುಜರಿಗೆ ಹಾಕಬೇಕು. ಆದರೆ ಸಂಸ್ಥೆ ಅಂಥ ಬಸ್ಸುಗಳನ್ನು ಉತ್ತರ ಕರ್ನಾಟಕ ಭಾಗದ ಘಟಕಗಳಿಗೆ ಕಳುಹಿಸಿ, ಗ್ರಾಮೀಣ ಭಾಗದಲ್ಲಿ ಸೇವೆಗೆ ಬಳಸಿಕೊಳ್ಳುತ್ತಿದೆ. ಹೀಗೆ ಗುಜರಿ ಸೇರಬೇಕಾದ ಅನೇಕ ಬಸ್ಸುಗಳು ಗ್ರಾಮೀಣ ಭಾಗದಲ್ಲಿ ಮಾತ್ರವಲ್ಲದೇ ನಗರ ಪ್ರದೇಶದಲ್ಲೂ ಸಂಚರಿಸುತ್ತಿದೆ.

ರಾಜ್ಯ ಸರಕಾರ ಮಹಿಳೆಯರ ಓಡಾಟಕ್ಕೆ ಶಕ್ತಿ ಯೋಜನೆ ಜಾರಿ ಮಾಡಿತೆ ವಿನಃ, ಮಹಿಳೆಯರ ಓಡಾಟಕ್ಕೆ ಹೊಸ ಬಸ್ಸುಗಳನ್ನು ಖರೀದಿಸುವ ಕೆಲಸಕ್ಕೆ ಮುಂದಾಗಿಲ್ಲ. ಗ್ಯಾರಂಟಿ ಯೋಜನೆ ಇಲ್ಲದಿದ್ದರೂ ಹಿಂದಿನ ಸರಕಾರಕ್ಕೆ ಹೊಸ ಬಸ್ ಖರೀದಿ ಮಾಡಲು ಸಾಧ್ಯವಾಗದೆ ಸಂಕಷ್ಟ ಎದುರಿಸಿತು. ಈಗ ಗ್ಯಾರಂಟಿ ಯೋಜನೆಯಿಂದಾಗಿ ಆದಾಯ ಇಲ್ಲದಿದ್ದರೂ ಹೊಸ ಬಸ್ ಖರೀದಿ ಸವಾಲು ಸರಕಾರದ ಮುಂದಿದೆ.

ಹೊಸ ಸರಕಾರ ಬಂದು 6 ತಿಂಗಳು ಕಳೆದರು ಬಸ್ ಖರೀದಿ ಪ್ರಕ್ರಿಯೆಗೆ ಮುಂದಾಗಿಲ್ಲ. ಹಳೆ ಬಸ್ಸುಗಳು ನಿರ್ವಹಣೆ ಇಲ್ಲದೆ ತುಕ್ಕು ಹಿಡಿಯುತ್ತಿವೆ. ಕೆಲ ಘಟಕಗಳಲ್ಲಿ ಬಸ್ಸುಗಳು ಸಂಚರಿಸಲು ಆಗದಷ್ಟು ಹಾಳಾಗಿ ಮೂಲೆ ಸೇರಿವೆ. ರಾಜ್ಯದಲ್ಲಿ ಪ್ರಯಾಣಿಕರ ಸಂಖ್ಯೆ ಏರುತ್ತಲೆ ಇದ್ದರೆ ಬಸ್ಸುಗಳ ಸಂಖ್ಯೆ ಮಾತ್ರ ಕಡಿಮೆಯಾಗುತ್ತಲೆ ಇದೆ. ಪರಿಸ್ಥಿತಿ ಹೀಗೆ ಮುಂದುವರಿದರೆ ಸಮೂಹ ಸಾರಿಗೆ ವ್ಯವಸ್ಥೆ ಹಳಿ ತಪ್ಪುವ ಸಾಧ್ಯತೆಯಿದೆ.

ಸರಕಾರ ಬಡ ಮತ್ತು ಮಧ್ಯಮ ವರ್ಗದ ಜನರ ಹಿತ ಕಾಪಾಡುವ ಮನಸ್ಸಿದ್ದರೆ, ವಾಯು ಮಾಲಿನ್ಯ, ಪರಿಸರ ಮಾಲಿನ್ಯ, ವಾಹನ ದಟ್ಟಣೆ , ಅಪಘಾತ ಪ್ರಮಾಣ ಕಡಿಮೆ ಮಾಡಬೇಕು ಎನ್ನುವ ಇಚ್ಛೆ ಹೊಂದಿದ್ದರೆ ಸಮೂಹ ಸಾರಿಗೆಯನ್ನು ಬಲಗೊಳಿಸಬೇಕು. ರಾಜ್ಯದ ಏಕೈಕ ಸಾರಿಗೆ ಸಂಸ್ಥೆಗೆ ತಕ್ಷಣಕ್ಕೆ ಬೇಕಾಗುವ ಬಸ್ಸುಗಳನ್ನು ಒದಗಿಸಬೇಕು. ಜನ ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳುವ ಮುನ್ನ ಎಚ್ಚೆತ್ತುಕೊಳ್ಳಬೇಕು.

ಕರುನಾಡಿನ ಹೆಮ್ಮೆಯ ಗಾಯಕ, ಸಂಗೀತಗಾರ ಸಿ.ಅಶ್ವಥ್ ಅವರ ಸಂಸ್ಮರಣೆ

ಸಂಗೀತ ಕ್ಷೇತ್ರದ ದೈತ್ಯ ಪ್ರತಿಭೆ ಸಿ.ಅಶ್ವಥ್

ಸಿ.ಅಶ್ವತ್ ಎಂಬ ಹೆಸರು ಕೇಳಿದೊಡನೆ ಮೊದಲು ನೆನಪಾಗುವುದು ಸುಗಮ ಸಂಗೀತ ಕ್ಷೇತ್ರ. ಈ ಕ್ಷೇತ್ರ ಅವರಿಗೆ ಬೇರೆಲ್ಲೂ ಸಿಗದ ಸಂತೃಪ್ತ ಭಾವನೆಯನ್ನು ತಂದು ಕೊಟ್ಟಿತು. ಈ ಕ್ಷೇತ್ರದಲ್ಲಿ ಅವರಿಗೆ ಅಪರಿಮಿತವಾದ ಅನುಭವ, ಆಸಕ್ತಿ ಹೆಚ್ಚಾಗಿತ್ತು. ರಂಗಭೂಮಿ, ಸುಗಮ ಸಂಗೀತ, ಚಲನಚಿತ್ರ ಕ್ಷೇತ್ರ ಈ ಮೂರರಲ್ಲೂ ಕೂಡ ಅಪ್ರತಿಮ ಸಾಧನೆ ಮಾಡಿದ ಏಕೈಕ ವ್ಯಕ್ತಿ ಎಂದು ಇವರನ್ನು ನಾವು ಕರೆಯಬಹುದು.

ಇಂತಹ ಮೇರು ವ್ಯಕ್ತಿತ್ವದ ಸಾಧನೆಯ ಶಿಖರವೇರಿದ ಅಶ್ವತ್‌ರವರ ಜನ್ಮದಿನ (ಜನನ: 29.12.1939) ಹಾಗೂ ಕರುನಾಡನ್ನು ಅಗಲಿದ (ಮರಣ:29.12.2009) ದಿನವೂ ಒಂದೇ ಆಗಿದೆ. ಬಾಲ್ಯದಲ್ಲಿಯೇ ಸಂಗೀತದಲ್ಲಿ ಅಪಾರ ಆಸಕ್ತಿ ಹೊಂದಿದ್ದ ಅಶ್ವತ್‌ರ ಮೂಲ ಹೆಸರು ಅಶ್ವಥ ನಾರಾಯಣ. ಆಗಲೇ ಅವರು ಹಿಂದುಸ್ತಾನಿ ಸಂಗೀತವನ್ನು ಕಲಿಯಲು ಶುರು ಮಾಡಿದರು. ದೇವಗಿರಿ ಶಂಕರರಾವ್ ಇವರ ಮೊದಲ ಸಂಗೀತ ಗುರು. ನಂತರ ನಾಟಕಗಳಿಗೆ ಸಂಗೀತ ನೀಡುವುದರಲ್ಲಿ ಸಿದ್ಧತೆ ಮಾಡಿಕೊಂಡರು.

ಹೀಗೆ ಮುಂದುವರಿದ ಅಶ್ವಥ್‌ರು ಮೊದಲ ಬಾರಿಗೆ ಸ್ವತಂತ್ರವಾಗಿ 'ಕಾಕನಕೋಟೆ' ಚಿತ್ರದ ಮೂಲಕ ಚಲನಚಿತ್ರ ಕ್ಷೇತ್ರಕ್ಕೂ ತಮ್ಮ ಹೆಜ್ಜೆ ಇಟ್ಟರು. ವೃತ್ತಿಯಲ್ಲಿ ಭಾರತೀಯ ದೂರವಾಣಿ ಉದ್ಯಮದಲ್ಲಿ ಕೆಲಸ ನಿರ್ವಹಿಸಿ 1992ರಲ್ಲಿ ನಿವೃತ್ತಿ ಪಡೆದು, ಸಂಪೂರ್ಣವಾಗಿ ಸಂಗೀತ ಕ್ಷೇತ್ರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು.

ಗಿರೀಶ್ ಕಾರ್ನಾಡ್‌ರ ಹಯವದನ, ತುಘಲಕ್, ನಾಗಮಂಡಲ, ಕಾಕನಕೋಟೆ ಇತ್ಯಾದಿ ನಾಟಕಗಳಿಗೆ ಸಂಗೀತ ನಿರ್ದೇಶನ ನೀಡಿದರು. 50ಕ್ಕೂ ಹೆಚ್ಚು ಕ್ಯಾಸೆಟ್‌ಗಳನ್ನು ಹೊರ ತಂದಿದ್ದರು. ಇವರಿಗೆ ಸ್ವರ ಸಂಯೋಜನೆ ಮಾಡುವುದು ಎಂದರೆ ಅಪಾರ ಪ್ರೀತಿ. ಅದರಲ್ಲಿ ನಿರಂತರ ಅಧ್ಯಯನದಲ್ಲಿ ತೊಡಗಿ-ಕೊಂಡಿದ್ದರು. ಅದರ ಫಲವಾಗಿ ಅವರು ಸಂಗೀತ ಸಂಯೋಜನೆ ಮಾಡಿದ ಯಾವುದೇ ಭಾವಗೀತೆ, ಚಲನಚಿತ್ರ ಗೀತೆ ಜನನಮನ್ನಣೆ ಪಡೆಯುತ್ತಿತ್ತು.

ಎದುರಿಗಿದ್ದ ಕವನಗಳಿಗೆ ತಮ್ಮದೇ ಆದ ಶೈಲಿಯಲ್ಲಿ ಒಂದು ಸಂಗೀತ ರೂಪಕೊಟ್ಟು ಉತ್ತಮ ಗಾಯಕರಿಂದ ಹಾಡಿಸಿ, ಪ್ರಚುರಪಡಿಸುವ ರೀತಿ ಬೆರಗು ಮೂಡಿಸುವಂಥದ್ದು. ಕವಿಗಳು ಬರೆದ ಸಾಲುಗಳು ಪುಸ್ತಕದಲ್ಲಿ ಅಡಗಿದ್ದ ಎಲ್ಲವನ್ನು ಹೊರತೆಗೆದು, ಅದಕ್ಕೆ ಸಂಗೀತ ಸ್ಪರ್ಶ ನೀಡಿ, ಅವರ ಜಗತ್ತಿನೆದುರು ಇಡುತ್ತಿದ್ದರು.

1990ರ ದಶಕದಲ್ಲಿ ಸಿ.ಅಶ್ವಥ್‌ರ ಸಂಗೀತ ನಿರ್ದೇಶನದ ಕುವೆಂಪುರವರ 'ಎಲ್ಲಾದರೂ ಇರು, ಎಂತಾದರು ಇರು...' ಹಾಡನ್ನು ಡಾ.ರಾಜ್‌ರವರೊಂದಿಗೆ ಹಾಡಿಸಿದ್ದು ಒಂದು ದಾಖಲೆ. ಕಾಕನಕೋಟೆಯಿಂದ ಇವರ ಚಲನಚಿತ್ರರಂಗ



ಪ್ರವೇಶದ ನಂತರ ಚಿನ್ನಾರಿ ಮುತ್ತ, ಸಂತ ಶಿಶುನಾಳ ಶರೀಫ, ಮೈಸೂರು ಮಲ್ಲಿಗೆ, ಕೊಟ್ರೇಶಿ ಕನಸು, ನಾಗಮಂಡಲ, ಸ್ಪಂದನ ಮುಂತಾದ ಜನಪ್ರಿಯ ಚಿತ್ರಗಳಿಗೆ ಸಂಗೀತ ನಿರ್ದೇಶನ ನೀಡಿದರು.

ಇವರ ಜನಪ್ರಿಯ ಧ್ವನಿಸುರುಳಿಗಳೆಂದರೆ, ಮೈಸೂರು ಮಲ್ಲಿಗೆ (ಕೆ.ಎಸ್. ನರಸಿಂಹಸ್ವಾಮಿ), ಶ್ರಾವಣ (ದ.ರಾ.ಬೇಂದ್ರೆ), ಶಿಶಿನಾಳ ಶರೀಫ್ ಸಾಹೇಬರ ಗೀತೆಗಳು (ಶರೀಫ), ದೀಪಿಕಾ(ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ), ಸುಬ್ಬಾ ಭಟ್ಟರ ಮಗಳೇ (ಬಿ.ಆರ್. ಲಕ್ಷ್ಮಣ ರಾವ್), ಕೆಂಗುಲಾಬಿ (ವಿವಿಧ ಕವಿಗಳು), ಕೈಲಾಸಂ ಗೀತೆಗಳು (ಟಿ.ಪಿ. ಕೈಲಾಸಂ), ತೂಗುಮಂಚ (ಎಚ್.ಎಸ್. ವೆಂಕಟೇಶಮೂರ್ತಿ), ನನ್ನವಳು (ಬಿ.ಆರ್. ಲಕ್ಷ್ಮಣ ರಾವ್), ಡಾ. ರಾಜ್ ಕುಮಾರ್ ಹಾಡಿರುವ ಎಲ್ಲಾದರೂ ಇರು, ಎಂತಾದರೂ ಇರು (ಕುವೆಂಪು), ನೇಸರ ನೋಡು (ಹವ್ಯಾಸಿ ರಂಗಭೂಮಿಯ ಗೀತೆಗಳು), ಮಾವು ಬೇವು (ಡಾ.ದೊಡ್ಡರಂಗೇ ಗೌಡ) ಮುಂತಾದವು.

ಇಂತಹ ಧೀಮಂತ ವ್ಯಕ್ತಿಗೆ ಸಂಗೀತ ಕ್ಷೇತ್ರದಲ್ಲಿ ಮೂರು ಬಾರಿ ರಾಜ್ಯ ಪ್ರಶಸ್ತಿ ಬಂದಿದೆ. 1980ರಲ್ಲಿ ಕರ್ನಾಟಕ ಸರ್ಕಾರ 'ರಾಜ್ಯೋತ್ಸವ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದೆ. ಜೊತೆಗೆ ಸಂತ ಶಿಶುನಾಳ ಶರೀಫ ಪ್ರಶಸ್ತಿ ಕೂಡ ಇವರಿಗೆ ಲಭಿಸಿದೆ. ರಂಗಭೂಮಿ, ಸುಗಮ ಸಂಗೀತ, ಚಲನಚಿತ್ರ ಈ ಮೂರು ಕ್ಷೇತ್ರಗಳನ್ನು ತಮ್ಮದೇ ಆದ ಶೈಲಿಯಲ್ಲಿ ಹೊಸತನದೊಂದಿಗೆ ಸಂಗೀತ ಮತ್ತು ಸಂಘಟನೆ ಮಾಡುವುದರ ಮೂಲಕ ತಾವು ಬೆಳೆದು, ಹಲವು ಯುವ ಪ್ರತಿಭೆಗಳನ್ನು ಬೆಳೆಸಿದ ಕೀರ್ತಿ ಸಿ. ಅಶ್ವಥ್‌ರವರಿಗೆ ಸಲ್ಲುತ್ತದೆ.

– ಕಾಳಿಹುಂಡಿ ಶಿವಕುಮಾರ್.
ಮೈಸೂರು.

ಜಾತ್ಯಾತೀತ ಮನೋಭಾವದಿಂದ 'ವಿಶ್ವಮಾನವ' ಸಂದೇಶ ಸಾರಿದ ಮಹಾನ್ ಕವಿ

ಆಗು ನೀ ಅನಿಕೇತನ...

ಕನ್ನಡ ಭಾಷೆ ಎಂದಾಗ ಎಲ್ಲ ಭಾಷಿಗರಿಗೂ ನೆನಪಾಗುವುದು ರಸಋಷಿ ಕುವೆಂಪು. ಅವರು ರಚಿಸಿರುವ ಕಾವ್ಯಗಳಲ್ಲೂ ಹೆಜ್ಜೆನಿನಂಥ ಸವಿ, ರಸೋತ್ಸಾಹ, ಆಧ್ಯಾತ್ಮದೊಂದಿಗೆ ಮೈಗೂಡಿಸಿಕೊಳ್ಳಬೇಕಾದ ವೈಚಾರಿಕ ಪ್ರಜ್ಞೆ, ಬೆಟ್ಟದಂಥ ನಿಲುವು ಕುವೆಂಪು ಅವರ ಕಾವ್ಯಗಳಲ್ಲಿ ನಾವು ಪಟ್ಟಿಮಾಡಬಹುದಾದ ಅಸಾಮಾನ್ಯ ಸಂಗತಿಗಳು.

ಹುಟ್ಟುವ ಪ್ರತೀ ಮಗುವು ವಿಶ್ವಮಾನವನೇ. ಅನಂತರ ಆ ಮಗುವನ್ನು ಜಾತಿ, ಮತದ ಕಟ್ಟುಪಾಡುಗಳಿಂದ ಬಂಧಿಸಲಾಗುತ್ತದೆ. ಆದರೆ ಹಾಗಾಗಬಾರದು. ಯಾವುದೇ ವ್ಯಕ್ತಿ ಜಾತಿಯಿಂದ ಮುಖ್ಯನಾಗಬಾರದು, ನೈತಿಕ ವ್ಯಕ್ತಿತ್ವದಿಂದ ಆತ ಮುಖ್ಯನಾಗಬೇಕು ಎಂಬ ಪರಿಕಲ್ಪನೆ ಕುವೆಂಪು ಅವರದಾಗಿತ್ತು. ಹಾಗಾಗಿ ಕುವೆಂಪು ಅವರ ಜಾತ್ಯಾತೀತ ಮನೋಭಾವದಿಂದ ಮೂಡಿ ಬಂದ ಆಶಯವೇ ವಿಶ್ವಮಾನವ ಸಂದೇಶ. ಬುದ್ಧ, ಬಸವರ ಹಾಗೆ ಸಮಾಜದಲ್ಲಿ ವ್ಯಕ್ತಿ ಸ್ವತಂತ್ರವಾಗಿ, ವೈಚಾರಿಕ ದೃಷ್ಟಿಕೋನವನ್ನು ಬೆಳೆಸಿಕೊಳ್ಳಬೇಕೆಂದು ಅವರು ಹೇಳುತ್ತಿದ್ದರು.

ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿಯನ್ನು ಅವರು ಪರಿಚಯಿಸಿದ್ದರು. ಈ ಪಂಚಮಂತ್ರ ಇನ್ನು ಮುಂದಿನ ದೃಷ್ಟಿಯಾಗಬೇಕಾಗಿದೆ ಎಂದಿದ್ದರು. ಯಾವ ಭಾವನೆಗಳು ಜಗತ್ತಿನಲ್ಲಿ ಎಲ್ಲ ಮಾನವರಿಗೂ ಅನ್ವಯವಾಗಬಹುದೋ, ಅಂತಹ ಭಾವನೆ, ದೃಷ್ಟಿ ಬರಿಯ ಯಾವುದೋ ಒಂದು ಜಾತಿಗೆ, ಮತಕ್ಕೆ, ಗುಂಪಿಗೆ, ಒಂದು ದೇಶಕ್ಕೆ ಮಾತ್ರ ಅನ್ವಯವಾಗುವುದಿಲ್ಲ. ಸರ್ವಕಾಲಕ್ಕೂ ಅನ್ವಯವಾಗುವ ಇವು ಮೂಲ ಮೌಲ್ಯಗಳು. ಕುವೆಂಪು ಬರೆದ ಆಧುನಿಕ ಕನ್ನಡ ಮಹಾಕಾವ್ಯ ಶ್ರೀರಾಮಾಯಣ ದರ್ಶನಂ ಕೇವಲ ರಾಮಾಯಣದ ಕತೆಯನ್ನು ಮಾತ್ರ ಓದಿಸುವುದಿಲ್ಲ. ಅದೊಂದು ಅಂತರಂಗದ ಅನುಭೂತಿ.



ಸಾರ್ವಕಾಲಿಕ ವಿಶ್ವಮಾನವ ಗೀತೆ 'ಓ ನನ್ನ ಚೇತನ...' ಸಮಾನತೆಯ ಪ್ರಜ್ಞೆಯ ಪ್ರತಿಫಲ. ಅವರ ಜನ್ಮದಿನೋತ್ಸವದ ಸುಸಂದರ್ಭದಲ್ಲಿ ಅವರಿಗೆ ನಾವು ಸಲ್ಲಿಸಬಹುದಾದ ಸೂಕ್ತ ಗೌರವವೆಂದರೆ, ಅವರು ಪ್ರಪಂಚಕ್ಕೆ ಕೊಡುಗೆಯಾಗಿ ಕೊಟ್ಟ ಸಂದೇಶವನ್ನು ಅಕ್ಷರಶಃ ಪಾಲಿಸುವ ಪ್ರಯತ್ನ ಹಾಗೂ ಅವರ ಉದಾತ್ತ ಚಿಂತನೆಗಳನ್ನು, ತತ್ವ ಸಿದ್ಧಾಂತಗಳನ್ನು ಅರಗಿಸಿಕೊಂಡು ಅವನ್ನ ಜೀವನದ ದಾರಿದೀಪಗಳನ್ನಾಗಿ ಮಾಡಿಕೊಳ್ಳುವುದು.

ಯಾವ ಭಾವನೆಗಳು ಜಗತ್ತಿನಲ್ಲಿ ಎಲ್ಲ ಮಾನವರಿಗೂ ಅನ್ವಯವಾಗಬಹುದೋ ಅಂತಹ ಭಾವನೆ, ದೃಷ್ಟಿ ಬರಿಯ ಯಾವುದೊ ಒಂದು ಜಾತಿಗೆ, ಮತಕ್ಕೆ, ಗುಂಪಿಗೆ, ಒಂದು ದೇಶಕ್ಕೆ ಮಾತ್ರ ಅನ್ವಯವಾಗುವುದಿಲ್ಲ. ಸರ್ವಕಾಲಕ್ಕೂ ಅನ್ವಯವಾಗುವ ಇವು ಮೂಲ ಮೌಲ್ಯಗಳು. ಈ ಮೌಲ್ಯಗಳು ಮಾನವರನ್ನು ಕೂಡಿಸಿ ಬಾಳಿಸುವತ್ತ ನಡೆದಾವು. ಗುಂಪುಗಾರಿಕೆಗೆಂದೂ ಇವು ತೊಡಗುವುದಿಲ್ಲ. ಅದೇನಿದ್ದರೂ ರಾಜಕೀಯದ ಕರ್ಮ. ವ್ಯಕ್ತಿ ಸ್ವಾತಂತ್ರ್ಯವನ್ನು ನೀಡಿಯೂ ಸಮಷ್ಟಿಯ ಉದ್ಧಾರದ ದೃಷ್ಟಿ ಇದರದು. ಈ ದೃಷ್ಟಿಗೆ ವ್ಯಕ್ತಿಗಳೆಷ್ಟೊ ಅಷ್ಟೂ ಸಂಖ್ಯೆಯ ಮತಗಳಿರು ವುದು ಸಾಧ್ಯ; ಅಷ್ಟೂ ವ್ಯಕ್ತಿಗಳು ಸಮಷ್ಟಿಯ ವಿಕಾಸಕ್ಕೆ ಸಾಧಕವಾಗುವುದೂ ಸಾಧ್ಯ. ಈ ದರ್ಶನವನ್ನೆ 'ವಿಶ್ವಮಾನವ ಗೀತೆ' ಸಾರುತ್ತದೆ.

ಕರ್ನಾಟಕ ಸರ್ಕಾರ 2015ರ ಡಿಸೆಂಬರ್‌ನಲ್ಲಿ ವಿಶ್ವ ಮಾನವ ಸಂದೇಶ ಸಾರಿದ ಕುವೆಂಪು ಅವರಿಗೆ ಗೌರವ ಸೂಚಿಸಲು ಪ್ರತಿವರ್ಷ ಡಿಸೆಂಬರ್ 29ರಂದು ವಿಶ್ವ ಮಾನವ ದಿನವನ್ನಾಗಿ ಆಚರಿಸುವುದಾಗಿ ಆದೇಶ ಹೊರಡಿಸಿದೆ. ಹೀಗೆ ರಾಷ್ಟ್ರಕವಿ ಕುವೆಂಪು ಅವರ ವೈಚಾರಿಕ ಪ್ರಜ್ಞೆಯೊಂದಿಗೆ ಪೂರ್ಣ ಅರಳಿದ ಬದುಕು ಅವರದಾಗಿತ್ತು. ಅನುಭವದ ಆಳಕ್ಕೆ ಇಳಿದು ಕವಿಯಾಗಿ ಜಗತ್ತಿಗೆ ವಿಚಾರಧಾರೆಗಳನ್ನು ಹಂಚುವ ಮೂಲಕ ವಿಶ್ವಕ್ಕೆ ಉತ್ತಮ ಸಂದೇಶಗಳನ್ನು ನೀಡಿ ಮನುಕುಲದಲ್ಲಿ ಅಜರಾಮರಾಗಿ ಉಳಿದದರು.

ವಿಶ್ವಮಾನವನಾಗಿ ಎಲ್ಲರ ಮನೆ ಮನದಲ್ಲಿ ಉಳಿದುಕೊಂಡಿರುವ ಇಂತಹ ಮಹಾನ್ ಸಂತನನ್ನು ನೆನೆಯುವುದೇ ನಮ್ಮೆಲ್ಲರ ಭಾಗ್ಯ.

– ಎಂ.ಎಚ್. ಸವದತ್ತಿ.
ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ ಏಕಲಾಸಪೂರ.

ರಾಷ್ಟ್ರಕವಿ ಕುವೆಂಪು ಅವರ ವಿಶ್ವಮಾನವ ಸೂತ್ರ ಇಂದಿನ ತುರ್ತು ಅಗತ್ಯತೆ

ವಿಶ್ವಮಾನವತೆಯ ಪರಮ ಪ್ರತಿನಿಧಿ–ಕುವೆಂಪು

ಕನ್ನಡಿಗರನ್ನು ಸಾಹಿತ್ಯದಲೆಗಳ ಮೇಲೆ ಸದಾ ತೇಲುವಂತೆ ಮಾಡಿದ ಪದ ಜಾದೂಗಾರ, ನಾಡದೇವಿಯನ್ನು ನಾಡಗೀತೆಯ ಪದಪುಷ್ಪಗಳಿಂದ ಅರ್ಚಿಸಿದ ಕನ್ನಡ ಪೂಜಾರಿ, ಸಹ್ಯಾದ್ರಿ ಸಾಲ ಕವಿಕುಲೋತ್ತಮ, ಕನ್ನಡ ಸಾಹಿತ್ಯ ಲೋಕದ ಹೆಮ್ಮೆಯ ರಸಕವಿ, ಋಷಿಕವಿ, ಯುಗದಕವಿ, ಜಗದಕವಿ, ರಾಷ್ಟ್ರಕವಿ, ಕನ್ನಡದ ಮೊದಲ ಜ್ಞಾನಪೀಠಿ, ಕರ್ನಾಟಕ ರತ್ನ ಎಂದು ಕೀರ್ತಿತರಾಗಿರುವ ಕುವೆಂಪು ಕನ್ನಡದ ಹಿರಿಮೆಯನ್ನು ಎತ್ತಿ ಹಿಡಿದ ಮಹಾನ್ ಚೇತನ.

ಇಂದು ಆ ಮಹಾನ್ ಚೇತನ ಧರೆಗವತರಿಸಿದ ದಿವ್ಯ ದಿನ. ಬದುಕಿನುದ್ದಕ್ಕೂ ವಿಶ್ವಮಾನವ ಸಂದೇಶ ಸಾರಿದ ಅವರ ಈ ಜನ್ಮದಿನವನ್ನು ಇಡೀ ನಾಡಿಗೆ ನಾಡೇ 'ವಿಶ್ವಮಾನವ ದಿನ'ವೆಂದು ಆಚರಿಸುತ್ತಿದೆ. ಬಾಲಕ ಪುಟ್ಟಪ್ಪ ಹುಟ್ಟಿದ್ದು 29ನೇ ಡಿಸೆಂಬರ್ 1904ರಂದು ಚಿಕ್ಕಮಗಳೂರು ಜಿಲ್ಲೆಯ ಹಿರೇಕೊಡಗಿ ಗ್ರಾಮದಲ್ಲಿ. ತಂದೆ ವೆಂಕಟಪ್ಪಗೌಡರು, ತಾಯಿ ಸೀತಮ್ಮ. ಆದರೆ ಅವರ ಬಾಲ್ಯ ತಮ್ಮ ತಂದೆ-ಯ ಊರಾದ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಕುಪ್ಪಳಿಯಲ್ಲಿ ಕಳೆಯಿತು. ಮಲೆನಾಡಿನ ಮಡಿಲಿನಲ್ಲಿ ಹುಟ್ಟಿ ಬೆಳೆದ ಕುವೆಂಪುಗೆ ಶಾಲೆ, ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ಕಲಿತದ್ದಕ್ಕಿಂತ ಹೆಚ್ಚಿನ ವಿಷಯವನ್ನು ಕಲಿಸಿದ್ದು ಮಲೆನಾಡಿನ ಪ್ರಕೃತಿ. ಹೀಗಾಗಿ ಅವರ ಎಲ್ಲಾ ಕೃತಿಗಳಲ್ಲಿ ಮಲೆನಾಡಿನ ಸೊಬಗು ಕಂಗೊಳಿಸುತ್ತದೆ.

ಮಾಧ್ಯಮಿಕ ಶಾಲೆಯಲ್ಲಿ ಓದುವಾಗಲೇ ಕುವೆಂಪು ಬರೆದಿದ್ದ 'ಬಿಗಿನರ್ಸ್ ಮ್ಯೂಸ್' ಎಂಬ ಇಂಗ್ಲೀಷ್ ಕವನ ಸಂಕಲನ ಭಾರತ ಭೇಟಿಗೆ ಬಂದಿದ್ದ ಐರಿಷ್ ಕವಿ ಜೆ.ಹೆಚ್. ಕಸಿನ್ಸ್‌ರ ಮೆಚ್ಚುಗೆಗೆ ಪಾತ್ರವಾಗಿತ್ತು. ನಂತರ ಅವರ ಸಲಹೆಯಂತೆ ಕನ್ನಡದಲ್ಲಿ ಬರೆಯಲಾರಂಭಿಸಿದ ಕುವೆಂಪು ಬರೆದ ಮೊದಲ ಕನ್ನಡ ಕವನ ಸಂಕಲನ 'ಅಮಲನ ಕಥೆ'. ಚಿಕ್ಕಂದಿನಿಂದಲೇ ಮಲೆನಾಡಿನ ಪರಿಸರದಲ್ಲಿ ಬೆಳೆದ ಕುವೆಂಪುರವರಿಗೆ ಅಪಾರವಾದ ಪರಿಸರ ಪ್ರೇಮ. ಅವರ

ತೋಂಟದಾರ್ಯ ಮಠದಲ್ಲಿ 'ಅವ್ವ'ನ ಕುರಿತು ವಿಶೇಷ ಶಿವಾನುಭವ, ಉಪನ್ಯಾಸ

ವೃದ್ಧಾಶ್ರಮಗಳ ಸಂಖ್ಯೆ ಹೆಚ್ಚುತ್ತಿರುವುದು ವಿಷಾಧನೀಯ

■ ವಿಜಯಸಾಕ್ಷಿ ಸುದ್ದಿ, ಗದಗ

ಒಂಭತ್ತು ತಿಂಗಳು ತನ್ನ ಗರ್ಭದಲ್ಲಿರಿಸಿಕೊಂಡು ಜನ್ಮ ನೀಡುವ ತಾಯಿ ದೈವಿಕ ಶಕ್ತಿಯ ಪ್ರತಿರೂಪವಾಗಿದ್ದು, ಅವಳ ಋಣವನ್ನು ತೀರಿಸುವ ಶಕ್ತಿ ಜಗತ್ತಿನಲ್ಲಿ ಯಾರಿಗೂ ಇಲ್ಲ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ನುಡಿದರು.

ಅವರು ನಗರದ ತೋಂಟದಾರ್ಯ ಮಠದಲ್ಲಿ ಇತ್ತೀಚೆಗೆ ಲಿಂಗಾಯತ ಪ್ರಗತಿಶೀಲ ಸಂಘ ಹಾಗೂ ಅವ್ವ ಸೇವಾ ಟ್ರಸ್ಟ್ ಹುಬ್ಬಳ್ಳಿ ಇವರ ಸಂಯುಕ್ತಾಶ್ರಯದಲ್ಲಿ ಮಾತೋಶ್ರೀ ಗುರವ್ವ ಶಿವಲಿಂಗಪ್ಪ ಹೊರಟ್ಟಿ ಸ್ಮರಣಾರ್ಥ ಜರುಗಿದ 'ಅವ್ವನ ಕುರಿತ ವಿಶೇಷ ಶಿವಾನುಭವ' ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು.

ಚಿಕ್ಕ ವಯಸ್ಸಿನಲ್ಲೇ ತಂದೆಯನ್ನು ಕಳೆದುಕೊಂಡಿದ್ದರಿಂದ ನನಗೆ ತಾಯಿಯೇ ಸರ್ವಸ್ವವಾಗಿದ್ದಳು. ನನ್ನ ವಿದ್ಯಾಭ್ಯಾಸಕ್ಕಾಗಿ ತನ್ನ ಆಭರಣಗಳನ್ನು ಮಾರಿ ಹಣ ನೀಡಿದ್ದು ಇನ್ನೂ ನೆನಪಿದೆ. ನಾನು ಹೈಸ್ಕೂಲು ಕಲಿಯಲು ತೆರಳಿದಾಗ ಪ್ರತಿ ತಿಂಗಳು ನಮ್ಮ ತಾಯಿಯೇ ಸ್ವತಃ ಹೈನುಗಾರಿಕೆ ಮಾಡಿ ನನ್ನ ಶೈಕ್ಷಣಿಕ ಖರ್ಚು-ವೆಚ್ಚಗಳನ್ನು ಪೂರೈಸುತ್ತಿದ್ದಳು. ಶ್ರಮಜೀವಿಯಾಗಿದ್ದ ನಮ್ಮ ತಾಯಿ ಹೊಲದಲ್ಲಿ ಇಳಿ ವಯಸ್ಸಿನಲ್ಲೂ ಕೃಷಿ ಕಾಯಕದಲ್ಲಿ ತೊಡಗಿಸಿಕೊಳ್ಳುತ್ತಿದ್ದಳು.

ನಾನು ವಿಧಾನ ಪರಿಷತ್ ಸದಸ್ಯನಾದ ಬಳಿಕ ಕುಮಾರಸ್ವಾಮಿ ಸರ್ಕಾರದಲ್ಲಿ ಶಿಕ್ಷಣ ಮಂತ್ರಿಯಾದಾಗ ಹೆಣ್ಣುಮಕ್ಕಳು ಪ್ರೌಢಶಿಕ್ಷಣದಿಂದ

ವಂಚಿತರಾಗದಂತೆ ಕ್ರಮ ವಹಿಸಿದೆ. ವಿದ್ಯಾರ್ಥಿಗಳು ಸಕಾಲಕ್ಕೆ ಶಾಲೆ ತಲುಪಲಿ ಎಂಬ ಕಾರಣಕ್ಕೆ ಸೈಕಲ್ ನೀಡುವ ಪರಿಪಾಠ ಆರಂಭಿಸಿದೆವು. ನಮ್ಮ ಹುಟ್ಟೂರಾದ ಯಡಹಳ್ಳಿಯಲ್ಲಿ ಮಕ್ಕಳ ಉನ್ನತ ಶಿಕ್ಷಣಕ್ಕಾಗಿ ಕೊಟ್ಯಾಂತರ ಬೆಲೆಬಾಳುವ ನಮ್ಮ 7 ಎಕರೆ ಜಮೀನಿನಲ್ಲೇ ಸರ್ಕಾರಿ ಶಾಲೆ-ಕಾಲೇಜನ್ನು ಆರಂಭಿಸಿದೆವು. ಅದಕ್ಕೆ ಸರಕಾರ 30 ಕೋಟಿಗೂ ಅಧಿಕ ಅನುದಾನ ಬಿಡುಗಡೆ ಮಾಡಿ ರಾಷ್ಟ್ರಮಟ್ಟದ ಸಂಸ್ಥೆಯನ್ನಾಗಿ ರೂಪಿಸಿದೆ ಎಂದರು.

ನನ್ನ ತಾಯಿಯ ಹೆಸರಿನಲ್ಲಿ ಸ್ಥಾಪನೆಯಾಗಿರುವ 'ಅವ್ವ' ಸೇವಾ ಟ್ರಸ್ಟ್ ಉದ್ಘಾಟನೆ ಮಾಡಿದ್ದು ಲಿಂ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು. ನಾನು ಜೀವನದಲ್ಲಿ ಅವರನ್ನು ಬಿಟ್ಟು ಯಾವುದೇ ಕಾರ್ಯಕ್ರಮ ಮಾಡಿಲ್ಲ. ಅವರ ಅಗಲಿಕೆಯಿಂದ ಸಾಕಷ್ಟು ನೋವುಂಟಾಗಿದೆ. ಈ ಪರಂಪರೆಯನ್ನು ಸಿದ್ಧರಾಮ ಶ್ರೀಗಳು ಮುಂದುವರೆಸಿರುವುದು ಸಮಾಧಾನ ತಂದಿದೆ. ಇತ್ತೀಚಿನ ದಿನಗಳಲ್ಲಿ ವೃದ್ಧಾಶ್ರಮಗಳ ಸಂಖ್ಯೆ ಹೆಚ್ಚುತ್ತಿರುವ ಬಗ್ಗೆ ಕಳವಳ

> ಹೊರಟ್ಟಿಯವರ ರಾಜಕೀಯ ಸಾಧನೆಗಳು ಕರ್ನಾಟಕದ ಪಾಲಿಗೆ ಮಹತ್ವದ ಮೈಲಿಗಲ್ಲಾಗಿದ್ದು, ಅವರ ಕುರಿತು ರಚಿತವಾದ 'ಹೋರಾಟದ ಹೊರಟ್ಟಿ' ಎಂಬ ಪುಸ್ತಕ ಓದಿದರೆ ಶ್ರೀಯುತರ ದಿಟ್ಟ ಹೋರಾಟದ ಮಜಲುಗಳನ್ನು ತಿಳಿಯಬಹುದು. ಶಿಕ್ಷಣ ಕ್ಷೇತ್ರದಲ್ಲಿ ಹೊರಟ್ಟಿಯವರು ಮಾಡಿದ ಸಾಧನೆ ಅಸಮಾನ್ಯವಾಗಿದ್ದು, ತಮ್ಮ ಬಳಿ ಅಹವಾಲು ಹಿಡಿದು ಬಂದ ಯಾರ ಹಿನ್ನೆಲೆಯನ್ನೂ ವಿಚಾರಿಸದೇ ಅವರ ಆಶೋತ್ತರ ಈಡೇರಿಸುವುದು ಅವರ ದೊಡ್ಡಗುಣ. ನಮ್ಮ ಶಿಕ್ಷಣ ಸಂಸ್ಥೆಗಳಿಗೂ ಸಹಾಯ ಮಾಡಿದ್ದಾರೆ.
> – **ಪ್ರೊ.ಶಿವಾನಂದ ಪಟ್ಟಣಶೆಟ್ಟರ.**
> **ಆಡಳಿತಾಧಿಕಾರಿಗಳು, ತೋಂಟದಾರ್ಯ ಮಠ.**

ವ್ಯಕ್ತಪಡಿಸಿದ ಅವರು, ತಂದೆ-ತಾಯಿಗಳ ಆರೈಕೆ ಮಾಡುವಂತೆ ಕರೆ ನೀಡಿದರು.

ಇತ್ತೀಚೆಗೆ ಬೆಳಗಾವಿ ರುದ್ರಾಕ್ಷಿಮಠದಿಂದ ಕೊಡಮಾಡುವ 'ಸೇವಾರತ್ನ' ಪ್ರಶಸ್ತಿಗೆ ಭಾಜನರಾದ ತೋಂಟದಾರ್ಯ ಮಠದ ಆಡಳಿತಾಧಿಕಾರಿಗಳಾದ ಪ್ರೊ. ಶಿವಾನಂದ ಪಟ್ಟಣಶೆಟ್ಟರನ್ನು ಸನ್ಮಾನಿಸಲಾಯಿತು.

ಸನ್ಮಾನೋತ್ತರವಾಗಿ ಅವರು ಮಾತನಾಡಿ, ಗೋಕಾಕ ಚಳುವಳಿ, ಮೂರು ಸಾವಿರ ಮಠದ ಪ್ರಕರಣ ಹೀಗೆ ಅನೇಕ ಸಮಸ್ಯೆಗಳು ಬಂದಾಗ ಹೊರಟ್ಟಿಯವರು ಲಿಂ. ಗುರುಗಳಿಗೆ ನೆರವಾಗಿದ್ದರು ಎಂದರು.

ಡಾ.ತೋಂಟದ ಸಿದ್ಧರಾಮ ಮಹಾಸ್ವಾಮಿಗಳ ಸಾನ್ನಿಧ್ಯ ವಹಿಸಿದ್ದರು. ಸಿದ್ಧಲಿಂಗನಗರದ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕಿ ಸಂಜೀವಿನಿ ಕೂಲಗುಂಡಿ, ಅವ್ವ ಸೇವಾ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಶಶಿ ಸಾಲಿ, ಗದಗ ಸಂಚಾಲಕ ಬಸವರಾಜ ಧಾರವಾಡ ಅತಿಥಿಗಳಾಗಿ ಭಾಗವಹಿಸಿದ್ದರು. ಸಾವಿತ್ರಿ ಲಮಾಣಿ ಸಂಗೀತ ಸೇವೆ ನೀಡಿದರು. ಗದುಗಿನ ಸ್ಪಂದನ ಕಿವುಡ ಹಾಗೂ ಮೂಗ ಮಕ್ಕಳ ಶಾಲೆಯ ವಿದ್ಯಾರ್ಥಿಗಳಿಗೆ ಬಟ್ಟೆ ಹಾಗೂ ಅವಶ್ಯಕ ಸಾಮಗ್ರಿ ವಿತರಿಸಲಾಯಿತು. ರಕ್ಷಿತಾ ಬಡಿಗೇರ ಧರ್ಮಗ್ರಂಥ ಪಠಿಸಿದರೆ, ಸರಸ್ವತಿ ಹೊಸಮನಿ ವಚನ ಚಿಂತನಗೈದರು. ಹುಬ್ಬಳ್ಳಿ 'ಅವ್ವ' ಸೇವಾ ಟ್ರಸ್ಟ್ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ದಾಸೋಹ ಸೇವೆ ವಹಿಸಿದ್ದರು.

ಗಂಗಾಪೂರ ಪೇಟೆಯಲ್ಲಿ ಕನಕದಾಸ ಜಯಂತಿ ಆಚರಣೆ

■ ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಗಂಗಾಪೂರ ಪೇಟೆಯಲ್ಲಿ ಗುರುವಾರ ದಾಸಶ್ರೇಷ್ಠ ಭಕ್ತ ಕನಕದಾಸರ ಜಯಂತಿಯನ್ನು ಆಚರಿಸಲಾಯಿತು. ಓಣಿಯ ಗುರು-ಹಿರಿಯರು, ಮಹಿಳೆಯರು, ಯುವಕರು ಭಕ್ತ ಕನಕದಾಸರ ಭಾವಚಿತ್ರಕ್ಕೆ ಪುಷ್ಪಾಂಜಲಿ ಸಲ್ಲಿಸಿದರು. ನಂತರ ಅನ್ನಸಂತರ್ಪಣೆ ಜರುಗಿತು.

ಈ ಸಂದರ್ಭದಲ್ಲಿ ಹಿರಿಯರಾದ ಹನುಮಂತಪ್ಪ ಮುಂಡರಗಿ, ಬಸಪ್ಪ ಮುದಕಟ್ಟಿ, ಬಸಪ್ಪ ಶಿರೂರ, ವಿರುಪಾಕ್ಷಪ್ಪ ಕೋತಂಬ್ರಿ, ಈರಪ್ಪ ಹಿಂಜೆಡ್ಡಿ, ದೇವಪ್ಪ ಹಿಂಜೆಡ್ಡಿ, ಯಮನಪ್ಪ ಗೋಂದಿ, ಹನಮಂತಪ್ಪ ಕೋಟೆಣ್ಣವರ, ಹನುಮಂತಪ್ಪ ಜಡಿ, ಈರಪ್ಪ ಜಡಿ, ದೇವಪ್ಪ ಮುದಕಟ್ಟಿ, ಮೋಹನ ಇಮರಾಪೂರ, ಬಸವರಾಜ ಅಣ್ಣಿಗೇರಿ, ಕುಮಾರ ಮಾರನಬಸರಿ, ಮುತ್ತು ಜಡಿ, ಮಲ್ಲೇಶ ಬಿಂಗಿ, ವಾಸು ಜಡಿ, ನಾಗಪ್ಪ ಬಿಂಗಿ, ಯಲ್ಲಪ್ಪ ಲಕ್ಕಣ್ಣವರ, ಸೋಮು ಮೇಟಿ, ಹುಲಿಗೆಪ್ಪ ಜಡಿ, ಮುತ್ತು ಲಕ್ಕಣ್ಣವರ, ಗಣೇಶ ಲತವಾರ, ಮಂಜು ಸತ್ಯಪ್ಪನವರ, ಸತೀಶ ಗಿಡ್ಡಹನುಮಣ್ಣವರ, ಫಕ್ಕೀರಪ್ಪ ಕೊರ್ಲಹಳ್ಳಿ, ಬಸು ಕೊರ್ಲಹಳ್ಳಿ, ಬಸವರಾಜ ಜಡಿ, ಮಂಜುನಾಥ ಜಡಿ, ಹನುಮಂತಪ್ಪ ಜಡಿ, ನಾಗಪ್ಪ ಜಡಿ, ಶಿವಪ್ಪ ಜಡಿ, ಯಲ್ಲಪ್ಪ ಗೌಡರ, ಪರಶು ಹಳ್ಳದ, ಯಲ್ಲಪ್ಪ ಜಡಿ, ರಮೇಶ ಕಿಲಾರಿ, ದೇವಪ್ಪ ಬಡಗೂಳಿ, ರಮೇಶ ಬಡಗೂಳಿ, ಕರಿಯಪ್ಪ ಜಡಿ, ಮಂಜು ಶಿರೂರ, ನಿಂಗಪ್ಪ ಗೂಳಗಣ್ಣವರ, ಬಸು ಹಿಂಜೆಡ್ಡಿ, ಮಹೇಶ ಮದ್ನಾಳ, ಸಿದ್ದಪ್ಪ ಗಳಗಂಟಿ, ನಿಂಗಪ್ಪ ಗಳಗಂಟಿ, ಲಕ್ಷ್ಮಣ ಬಾಂಡಗೆ, ಕೃಷ್ಣ ಹಡಪದ ಮುಂತಾದವರು ಉಪಸ್ಥಿರಿದ್ದರು.

ಅಂತರ್ ಕಾಲೇಜ್ ಫುಟ್ಬಾಲ್ ಪಂದ್ಯಾವಳಿಯಲ್ಲಿ ಗೆಲುವು

■ ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ಸ್ಪೋರ್ಟ್ಸ್ ಮತ್ತು ಎಜುಕೇಶನ್ ಅಕಾಡೆಮಿ(ಕೆ.ಎಸ್.ಇ.ಎ) ಇಲ್ಲಿನ ಕೆ.ಎಚ್. ಪಾಟೀಲ ಕ್ರೀಡಾಂಗಣದಲ್ಲಿ ಹಮ್ಮಿಕೊಂಡಿದ್ದ ಸೀಜನ್-2ರ ಅಂತರ ಕಾಲೇಜು ಫುಟ್ಬಾಲ್ ಪಂದ್ಯಾವಳಿಯ ಅಂತಿಮ ಪಂದ್ಯದಲ್ಲಿ ಜಿಮ್ಸ್ ವೈದ್ಯಕೀಯ ಮಹಾವಿದ್ಯಾಲಯವನ್ನು ಸೋಲಿಸಿ ಗದಗ ತೋಂಟದಾರ್ಯ ತಾಂತ್ರಿಕ ಮಹಾವಿದ್ಯಾಲಯ ಚಾಂಪಿಯನ್ ಆಗಿ ಹೊರಹೊಮ್ಮಿದೆ.

ವಿಜೇತ ತಂಡದಲ್ಲಿ ಅಭಿಷೇಕ ಬಳ್ಳಾರಿ, (ತಂಡದ ನಾಯಕ) ಪ್ರಣವ ಬುರುಡಿ, ದರ್ಶನ್ ದೊಡ್ಡಮನಿ, ವಿನಾಯಕ ಅರಸಿದ್ಧಿ, ಅಭಿಷೇಕ ಕರಿಯಲ್ಲಪ್ಪನವರ, ವಿನಾಯಕ ಉಪ್ಪಿನ, ಫರ್ಝಲ್ ಶೇಖ್, ಪ್ರಾಂಜಲ್ ಮಮದಾಪುರ್ (ಗೋಲ್ ಕೀಪರ್), ಮುಕಿತ್ ಮುಜಾವರ, ಶಿವದೀಪ ಶಿವಕಲಿಮಠ ಆಟಗಾರರಾಗಿದ್ದಾರೆ.

ಮಹಾವಿದ್ಯಾಲಯದ ಆಡಳಿತ ಮಂಡಳಿ, ಪ್ರಾಚಾರ್ಯ ಡಾ. ಎಂ.ಎಂ. ಅವಟಿ, ಉಪ ಪ್ರಾಚಾರ್ಯ ಡಾ. ಈರಣ್ಣ ಕೋರಚಗಾಂವ್, ಟ್ರೇನಿಂಗ್ ಮತ್ತು ಪ್ಲೇಸ್ಮೆಂಟ್ ಅಧಿಕಾರಿ ಪ್ರೊ. ಮಹಾಂತ ಕಟ್ಟಿಮನಿ, ದೈಹಿಕ ಶಿಕ್ಷಕರಾದ ವೀರೇಶ, ಡಾ. ಜಿ.ಡಿ. ರೇವಣಕರ್, ಪ್ರೊ. ಸಂತೋಷ ಕಂದಗಲ್ಲ, ಎಲ್ಲ ವಿಭಾಗದ ಮುಖ್ಯಸ್ಥರು, ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ವಿಜೇತ ತಂಡವನ್ನು ಅಭಿನಂದಿಸಿದ್ದಾರೆ.

ನಿವೇಶನದ ಮೇಲಿದ್ದ ಪ್ರಕರಣಗಳ ಇತ್ಯರ್ಥ

▶▶ ಮೊದಲನೇ ಪುಟದಿಂದ

ಇದಕ್ಕೆ ಸಭೆಯಲ್ಲಿ ಸೇರಿದ್ದ ಸಾರ್ವಜನಿಕರು ಒಪ್ಪಿಗೆ ನೀಡಿದರು.

ಕಳೆದ 2022ರಲ್ಲಿ ನಡೆದ ಗ್ರಾಮ ಸಭೆಯಲ್ಲಿ 25 ಜನರ ಫಲಾನುಭವಿಗಳ ಆಯ್ಕೆಯಲ್ಲಿ ಒಬ್ಬರನ್ನು ಕೈಬಿಡಲಾಗಿದೆ ಅದನ್ನು ಸರಿಪಡಿಸಬೇಕು. ನಿವೇಶನದ ಚಕ್ಕುಬಂದಿಗೆ ನಂಬರ್ ಹಾಕುವುದು ವಿಳಂಬವಾಗುತ್ತಿದೆ ಹಾಗೂ ಶೈಕ್ಷಣಿಕ ಅಭಿವೃದ್ಧಿಗೆ ಹೋರಾಡಿದ ಸಾವಿತ್ರಿಭಾಯಿ ಪುಲೆ ಅವರ ಹೆಸರನ್ನು ನಾಮಕರಣ ಮಾಡಬೇಕು ಎಂದು ಒತ್ತಾಯಿಸಿದರು. ಇದಕ್ಕೆ ಉತ್ತರಿಸಿದ ಅಧ್ಯಕ್ಷ ಕೆ.ಎಸ್. ಪೂಜಾರ, ಬಿಟ್ಟು ಹೋದ ಫಲಾನುಭವಿ ಬಗ್ಗೆ ಪರೀಶಿಲಿಸಿ ಸೇರ್ಪಡೆ ಮಾಡಲಾಗುವುದು ಎಂದರು. ಸದಸ್ಯ ಲಕ್ಷ್ಮಣ ಗುಡಸಲಮನಿ, ಬಸವರಾಜ ಮುಳ್ಳಾಳ, ಹಂಚಿಕೆ ಪ್ರಕ್ರಿಯೆ ಮುಗಿದ ನಂತರ ಇದಕ್ಕೆ ಸಭೆ ಕರೆದು ತೀರ್ಮಾನ ಕೈಗೊಳ್ಳುವುದು ಸೂಕ್ತ ಎಂದರು.

ವಾರ್ಡ್ ಸಭೆಯಲ್ಲಿ ಚರ್ಚಿಸಿದ ವಿವಿಧ ವಿಷಯಗಳನ್ನು ಕಾರ್ಯದರ್ಶಿ ಪ್ರದೀಪ ಆಲೂರ ಸಭೆಗೆ ತಿಳಿಸಿದರು. ಗ್ರಾ.ಪಂ ಅಧ್ಯಕ್ಷ ಕೆ.ಎಸ್. ಪೂಜಾರ ಅಧ್ಯಕ್ಷತೆ ವಹಿಸಿದ್ದರು. ನೋಡೆಲ್ ಅಧಿಕಾರಿ, ತಾ.ಪಂ ಮನೆರೆಗಾ ಸಹಾಯಕ ನಿರ್ದೇಶಕ ಕುಮಾರ ಪೂಜಾರ, ಗ್ರಾ.ಪಂ ಉಪಾಧ್ಯಕ್ಷೆ ಪುಷ್ಪಾ ಪಾಟೀಲ, ಪಿ.ಡಿ.ಓ ರಾಜಕುಮಾರ ಭಜಂತ್ರಿ, ಗ್ರಾ.ಪಂ ಸದಸ್ಯರು, ವೈದ್ಯಾಧಿಕಾರಿ ಹರಿದಾಸ, ಗ್ರಾಮ ಲೆಕ್ಕಾಧಿಕಾರಿ ದೇಸಾಯಿಗೌಡ್ರ, ಅಂಗನವಾಡಿ ಮೇಲ್ವಿಚಾರಕಿ ಶಾಹಿದಾಬೇಗಂ ಹತ್ತಿವಾಲೆ, ವಿವಿಧ ಶಾಲೆಯ ಮುಖ್ಯೋಪಾಧ್ಯಾಯರು, ಅಂಗನವಾಡಿ, ಆಶಾ, ಕಾರ್ಯಕರ್ತರು ಹಾಜರಿದ್ದರು. ಲೆಕ್ಕಾಧಿಕಾರಿ ತುಕಾರಾಮ ಹುಲಗಣ್ಣವರ ಸ್ವಾಗತಿಸಿ, ನಿರೂಪಿಸಿದರು.

ಕರವೇ ರಾಜ್ಯಾಧ್ಯಕ್ಷರ ಬಿಡುಗಡೆಗೆ ಮನವಿ

■ ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷರಾದ ಟಿ.ಎ. ನಾರಾಯಣಗೌಡರು ಸೇರಿದಂತೆ ಕರವೇ ರಾಜ್ಯದ ಮುಖಂಡರು, ಕಾರ್ಯಕರ್ತರನ್ನು ಬಿಡುಗಡೆ ಗೊಳಿಸುವಂತೆ ಕರವೇ ಗದಗ ತಾಲೂಕು ಘಟಕದ ವತಿಯಿಂದ ಗದಗ ತಹಸೀಲ್ದಾರರ ಮುಖಾಂತರ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಕರವೇ ತಾಲೂಕಾಧ್ಯಕ್ಷ ನಾಗಪ್ಪ ಅಣ್ಣಿಗೇರಿ ಮನವಿ ಸಲ್ಲಿಸಿ ಮಾತನಾಡಿ, ಡಿ.27ರಂದು ನಡೆದ ಕನ್ನಡದ ನಾಮಫಲಕದ ಅಭಿಯಾನದ ಸಂದರ್ಭದಲ್ಲಿ ಇಂಗ್ಲಿಷ್ ಹಾಗೂ ಹಿಂದಿ ನಾಮಫಲಕಗಳನ್ನು ಕಿತ್ತು ಎಸೆಯುವ ಮೂಲಕ ಕನ್ನಡ ಜಾಗೃತಿ ಮೂಡಿಸುವ ಸಂದರ್ಭದಲ್ಲಿ ಕರವೇ ರಾಜ್ಯಾಧ್ಯಕ್ಷ ಟಿ.ಎ. ನಾರಾಯಣಗೌಡ್ರ ಮತ್ತು ಕರವೇ ರಾಜ್ಯ ಮುಖಂಡರನ್ನು, ಕಾರ್ಯಕರ್ತರನ್ನು ಬಂಧಿಸಿದ್ದಾರೆ. ಈ ಕೂಡಲೇ ಅವರನ್ನು ಬಿಡುಗಡೆ ಮಾಡಬೇಕು ಎಂದರು.

ಈ ಸಂದರ್ಭದಲ್ಲಿ ವೇದಿಕೆಯ ಹನಮಂತ ಪೂಜಾರ, ನಿಂಗನಗೌಡ ಮಾಲಿಪಾಟೀಲ, ಯಲ್ಲಪ್ಪ ಭೋವಿ, ವೀರಣ್ಣ ಹುರಕಡ್ಲಿ, ಅಲ್ಲಾಸಾಬ ನದಾಫ, ಮುಸ್ತಾಕ ಡಾವಣಗೇರಿ, ಪ್ರವೀಣ ಬನ್ನಿಗೋಳ, ವಿರೇಶ ರೋಣದ, ಫಾರೂಕ ಕನವಳ್ಳಿ, ಚಂದ್ರು ಮಣ್ಣೂರ, ಶಿವು ಕೋಣಿಮನಿ, ಜಾಫರ ಕರೆಕಾಯಿ ಸೇರಿದಂತೆ ಕರವೇ ಕಾರ್ಯಕರ್ತರು ಉಪಸ್ಥಿತರಿದ್ದರು.

ಸಂಪೂರ್ಣ ಮಾಹಿತಿಯೊಂದಿಗೆ ವ್ಯವಹರಿಸಿ

▶▶ ಮೊದಲನೇ ಪುಟದಿಂದ

ಈ ಹಿಂದೆ ವಸ್ತುಗಳನ್ನು ನೇರವಾಗಿ ಹಣ ಕೊಟ್ಟು ಖರೀದಿಸುತ್ತಿದ್ದೆವು. ಆದರೆ ಇತ್ತೀಚಿನ ದಿನಗಳಲ್ಲಿ ಆನ್‌ಲೈನ್ ಮೂಲಕ ವಸ್ತುಗಳ ಖರೀದಿ ಹಾಗೂ ಸೇವೆಯನ್ನು ಪಡೆಯುತ್ತಿದ್ದು, ಹೊಸ ಸವಲತ್ತುಗಳೊಂದಿಗೆ ಹೊಸ ಸಮಸ್ಯೆಗಳು ಉದ್ಭವಿಸಿದವು. ತದನಂತರ ಕೆಲವು ಬದಲಾವಣೆಗಳೊಂದಿಗೆ ಗ್ರಾಹಕರ ರಕ್ಷಣೆಗೆ 2019ರಲ್ಲಿ ಹೊಸ ಕಾಯ್ದೆ ಜಾರಿ ಮಾಡಲಾಯಿತು ಎಂದು ವಿವರಿಸಿದರು.

ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಸದಸ್ಯ ರಾಜು ನಾಮದೇವ ಮೇತ್ರಿ ಮಾತನಾಡಿ, ಗ್ರಾಹಕರು ಇ-ಕಾಮರ್ಸ್ ಮತ್ತು ಡಿಜಿಟಲ್ ವ್ಯಾಪಾರದ ಯುಗದಲ್ಲಿ ಗ್ರಾಹಕರ ರಕ್ಷಣೆ ಕುರಿತು ಮಾಹಿತಿ ನೀಡಿದರು.

ಜಿಲ್ಲಾಧಿಕಾರಿಗಳ ಕಾನೂನು ಸಲಹೆಗಾರರು ಹಾಗೂ ನಿವೃತ್ತ ನ್ಯಾಯಾಧೀಶರಾದ ಎಸ್.ಜಿ. ಪಲ್ಲೇದ ಮಾತನಾಡಿ, ಇ ಕಾಮರ್ಸ್ ಮತ್ತು ಡಿಜಿಟಲ್ ಟ್ರೇಡ್‌ನಲ್ಲಿ ಆನ್‌ಲೈನ್ ಮುಖಾಂತರ ವಸ್ತುಗಳನ್ನು ಖರೀದಿಸುತ್ತೇವೆ. ವಸ್ತುಗಳ ಗುಣಮಟ್ಟದಲ್ಲಿ ಕಳಪೆ ಎಂದು ಕಂಡುಬಂದಲ್ಲಿ ವಾಟ್ಸ್‌ಅಪ್ ಮುಖಾಂತರ ದೂರು ಸಲ್ಲಿಸಿ ಪರಿಹಾರ ಕಂಡುಕೊಳ್ಳಬೇಕು. ಸಾರ್ವಜನಿಕರು ಬ್ಯಾಂಕ್‌ನ ಸೇವಾ ನ್ಯೂನತೆಯಿಂದ ಮೋಸ ಹೋದಾಗ ಅಥವಾ ಶೋಷಣೆಗೊಳಗಾದ ಅಂತಹ ಸಂದರ್ಭದಲ್ಲಿ ಬ್ಯಾಂಕ್‌ಗೆ ನೀಡಿದ ಲಿಖಿತ ದೂರಿನ ದಾಖಲೆಗಳನ್ನು ಆಯೋಗಕ್ಕೆ ಹಾಜರುಪಡಿಸಿ ಪರಿಹಾರ ಕಂಡುಕೊಂಡಿರುವ ಕುರಿತು ಉದಾಹರಣೆ ಸಹಿತ ವಿವರಿಸಿದರು.

ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಮಹಿಳಾ ಸದಸ್ಯೆ ಯಶೋಧಾ ಪಾಟೀಲ ಪ್ರಾಸ್ತಾವಿಕವಾಗಿ ಮಾತನಾಡಿ, ವಸ್ತುಗಳನ್ನು ಖರೀದಿಸುವ ಹಾಗೂ ಸೇವೆಯನ್ನು ಪಡೆಯುವ ಪ್ರತಿಯೊಬ್ಬರೂ ಗ್ರಾಹಕರಾಗಿರುತ್ತಾರೆ. ಗ್ರಾಹಕರಿಗೆ ತಾವು ಖರೀದಿಸುವ ವಸ್ತುವಿನ ಬಳಕೆ ಕುರಿತು ತಿಳುವಳಿಕೆ ಇರಬೇಕು. ಆನ್‌ಲೈನ್ ಮೂಲಕ ವ್ಯವಹರಿಸುವಾಗ ವಸ್ತುವಿನ ಸಂಪೂರ್ಣ ವಿವರ ಪಡೆಯುವುದು ಮುಖ್ಯವಾಗಿದೆ ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಎಂ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಂ.ಐ. ಹಿರೇಮನಿಪಾಟೀಲ, ಎಚ್.ಸಿ.ಇ.ಎಸ್.ಬಿಬಿಎ ಕಾಲೇಜು ಮಹಾವಿದ್ಯಾಲಯದ ಪ್ರಾಚಾರ್ಯರಾದ ಪಲ್ಲವಿ ಬಯ್ಯಾರ, ಕಾನೂನು ಮಾಪನ ಶಾಸ್ತ್ರ ಇಲಾಖೆಯ ಸಹಾಯಕ ನಿರ್ದೇಶಕ ಎಸ್.ಬಿ. ಪೂಜಾರಿ, ಬಿಬಿಎ ಕಾಲೇಜು ಮಹಾವಿದ್ಯಾಲಯದ ವಿದ್ಯಾರ್ಥಿಗಳು, ಸ್ತ್ರೀಶಕ್ತಿ ಸಂಘದವರು, ವಿವಿಧ ಇಲಾಖೆ ಅಧಿಕಾರಿಗಳು, ಆಹಾರ ಇಲಾಖೆಯ ಸಿಬ್ಬಂದಿಗಳು ಹಾಜರಿದ್ದರು.

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪನಿರ್ದೇಶಕ ಗಂಗಪ್ಪ. ಎಂ ಸ್ವಾಗತಿಸಿದರು. ಮಂಜರಿ ಹೊಂಬಾಳಿ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

ಇದೇ ಸಂದರ್ಭದಲ್ಲಿ ಕಾನೂನು ಮಾಪನಶಾಸ್ತ್ರ ಇಲಾಖೆಯಿಂದ ಏರ್ಪಡಿಸಲಾದ ವಸ್ತುಪ್ರದರ್ಶನವನ್ನು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷರಾದ ರಾಚಪ್ಪ. ಕೆ ತಾಳಿಕೋಟಿ ಉದ್ಘಾಟಿಸಿದರು.

ನಾಳೆಯಿಂದ ಬಿ.ಇಡಿ ಕೋರ್ಸಿನ ದಾಖಲಾತಿ ಪರಿಶೀಲನೆ

■ ವಿಜಯಸಾ

ದಿ. ಅಂದಾನಪ್ಪ ದೊಡ್ಡಮೇಟಿ ಸಮಾಧಿ ಅಭಿವೃದ್ಧಿಗೆ ಜಿಲ್ಲಾಡಳಿತ ನಿರ್ಧಾರ

ಸಚಿವ ಪಾಟೀಲ ನೇತೃತ್ವದಲ್ಲಿ ನಾಳೆ ಸಭೆ

■ ವಿಜಯಸಾಕ್ಷಿ ಸುದ್ದಿ, ಗದಗ

ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರ ಅಧ್ಯಕ್ಷತೆಯಲ್ಲಿ ಜರುಗಿದ ಸಭಾ ನಡುವಳಿಯಲ್ಲಿ ಮೈಸೂರು ರಾಜ್ಯವು ಕರ್ನಾಟಕ ಎಂದು ಮರು ನಾಮಕರಣವಾಗಿ 1ನೇ ನವೆಂಬರ್ 2023 ಕ್ಕೆ 50 ವರ್ಷ ಪೂರ್ಣಗೊಂಡಿದ್ದು, ಈ ಶುಭ ಸಂದರ್ಭದಲ್ಲಿ ಕರ್ನಾಟಕ ಏಕೀಕರಣಕ್ಕಾಗಿ ಹೋರಾಡಿ ಹುತಾತ್ಮರಾದಂತಹ ಗದಗ ಜಿಲ್ಲೆಯ ರೋಣ ತಾಲೂಕಿನ ಜಕ್ಕಲಿ ಗ್ರಾಮದಲ್ಲಿರುವ ಅಂದಾನಪ್ಪ ದೊಡ್ಡಮೇಟಿ ಇವರ ಸಮಾಧಿಯನ್ನು ಗದಗ ಜಿಲ್ಲಾಡಳಿತದ ವತಿಯಿಂದ ಅಭಿವೃದ್ಧಿ ಪಡಿಸಲು ತೀರ್ಮಾನಿಸಲಾಗಿದೆ.

ರಾಜ್ಯದ ಕಾನೂನು, ನ್ಯಾಯ ಹಾಗೂ ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಸಚಿವರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅವರ ಅಧ್ಯಕ್ಷತೆಯಲ್ಲಿ ದಿ.ಅಂದಾನಪ್ಪ ದೊಡ್ಡಮೇಟಿ ಇವರ ಸಮಾಧಿ ಅಭಿವೃದ್ಧಿಪಡಿಸುವ ಕುರಿತು ಡಿ. 30 ರಂದು ಸಂಜೆ 5 ಗಂಟೆಗೆ ಜಿಲ್ಲಾಡಳಿತ ಭವನದ ಸಭಾಭವನದಲ್ಲಿ ಸಭೆಯನ್ನು ಏರ್ಪಡಿಸಲಾಗಿದೆ.

ಈ ಸಭೆಗೆ ಆಗಮಿಸಿ ತಮ್ಮ ಅಮೂಲ್ಯ ಸಲಹೆ/ಅಭಿಪ್ರಾಯಗಳನ್ನು ನೀಡಬೇಕೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮರಾಠಾ ವಿದ್ಯಾವರ್ಧಕ ಸಂಘದ ಸರ್ವಸಾಧಾರಣ ಸಭೆ

■ ವಿಜಯಸಾಕ್ಷಿ ಸುದ್ದಿ, ಗದಗ

ಮುಳಗುಂದ ನಾಕಾ ಹತ್ತಿರವಿರುವ ಮರಾಠಾ ವಿದ್ಯಾವರ್ಧಕ ಸಂಘದ ಸರ್ವ ಸಾಧಾರಣ ಸಭೆಯು ಜನವರಿ 7, ರವಿವಾರ ಬೆಳಿಗ್ಗೆ 11 ಗಂಟೆಗೆ ಸಂಘದ ಅಧ್ಯಕ್ಷ ವಿನಿತಕುಮಾರ ಪ್ಹಿ.ಜಗತಾಪ ಇವರ ಅಧ್ಯಕ್ಷತೆಯಲ್ಲಿ ಜರುಗಲಿದೆ.

ಸಂಘದ ಸರ್ವ ಸದಸ್ಯರು ಹಾಗೂ ಸಮಾಜ ಬಾಂಧವರು ಸಭೆಯಲ್ಲಿ ಪಾಲ್ಗೊಳ್ಳಬೇಕೆಂದು ಗೌರವ ಕಾರ್ಯದರ್ಶಿ ಶಿವಾಜಿ ವಾಯ್.ಗ್ವಾರಿ ಪ್ರಕಟಣೆ ಮೂಲಕ ವಿನಂತಿಸಿದ್ದಾರೆ.

ಜಾತ್ರಾ ಮಹೋತ್ಸವದ ಧರ್ಮ ಸಮಾರಂಭದಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳು

ನೈತಿಕ ನಿಯಮಗಳು ಸರ್ವಕಾಲಕ್ಕೂ ಮಾನ್ಯ

■ ವಿಜಯಸಾಕ್ಷಿ ಸುದ್ದಿ, ಗದಗ

ಸಂತೃಪ್ತಿ, ಸಮೃದ್ಧಿಗಾಗಿ ಧರ್ಮಾಚರಣೆ ಬೇಕು. ವರ್ತಮಾನ ಮತ್ತು ಭವಿಷ್ಯತ್ತಿಗೆ ಇತಿಹಾಸದ ಅರಿವು ಮುಖ್ಯ. ದೇವಸ್ಥಾನಗಳು ಜನಮನದಲ್ಲಿ ಸಂಸ್ಕಾರ ಮತ್ತು ಜಾಗೃತಿ ಉಂಟು ಮಾಡುವ ಪವಿತ್ರ ತಾಣ. ದೇವಸ್ಥಾನಗಳು ಭಾರತೀಯ ಸಂಸ್ಕೃತಿಯ ಶ್ರದ್ಧಾ ಕೇಂದ್ರಗಳಾಗಿವೆ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಗುರುವಾರ ನಗರದ ಶ್ರೀ ವೀರಭದ್ರೇಶ್ವರ ಹಾಗೂ ಪರ್ವತ ಮಲ್ಲೇಶ್ವರ ದೇವಸ್ಥಾನದ ಶತಮಾನೋತ್ಸವ ಮತ್ತು ಜಾತ್ರಾ ಮಹೋತ್ಸವದ ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ನಾಗರಿಕತೆ ಹೆಸರಿನಲ್ಲಿ ಸಂಸ್ಕೃತಿ ನಾಶಗೊಳ್ಳಬಾರದು. ಯುವ ಜನಾಂಗ ಈ ದೇಶದ ಆಸ್ತಿ ಮತ್ತು ಶಕ್ತಿಯಾಗಿದ್ದಾರೆ. ಅವರಿಗೆ ಯೋಗ್ಯ ಮಾರ್ಗದರ್ಶನ ಮತ್ತು ಸಂಸ್ಕಾರ ಕೊಟ್ಟರೆ ದೇಶದ ಸಂಪತ್ತಾಗುತ್ತಾರೆ. ಶ್ರೀ ಜಗದ್ಗುರು ರಂಭಾಪುರಿ ಪೀಠದ ಕ್ಷೇತ್ರನಾಥನಾಗಿ ಪೂಜೆಗೊಳ್ಳುವ ಶ್ರೀ ವೀರಭದ್ರಸ್ವಾಮಿ ನಾಡಿನೆಲ್ಲೆಡೆ ನೆಲೆಸಿದ್ದಾನೆ. ದಕ್ಷಬ್ರಹ್ಮನ ದುರಹಂಕಾರ ನಾಶಗೊಳಿಸಿ ಶಿವಜ್ಞಾನ ಸಂವರ್ಧನೆಗೆ ಶ್ರಮಿಸಿದ ಮಹಾಪುರುಷ. ಬೆಟಗೇರಿ ನಗರದ ಶ್ರೀ ವೀರಭದ್ರೇಶ್ವರ ಮತ್ತು ಪರ್ವತ ಮಲ್ಲೇಶ್ವರ ದೇವಸ್ಥಾನದ ಶತಮಾನೋತ್ಸವ ಸಮಾರಂಭ ಸಂಭ್ರಮದಿಂದ ಜರುಗುತ್ತಿರುವುದು ಅತ್ಯಂತ ಸಂತೋಷ ಉಂಟು ಮಾಡಿದೆ. ಇದಕ್ಕಾಗಿ ಶ್ರಮಿಸಿದ ದೇವಸ್ಥಾನದ ಮತ್ತು ಶತಮಾನೋತ್ಸವ

ಸಮಿತಿಯ ಎಲ್ಲಾ ಸದಸ್ಯರಿಗೆ ಶುಭ ಹಾರೈಸಿದರು. ಇದೇ ಸಂದರ್ಭದಲ್ಲಿ 'ಗುಗ್ಗಳ ಪ್ರಿಯ' ಸ್ಮರಣ ಸಂಚಿಕೆಯನ್ನು ಶ್ರೀ ರಂಭಾಪುರಿ ಜಗದ್ಗುರುಗಳು ಬಿಡುಗಡೆ ಮಾಡಿದರು.

ನೇತೃತ್ವ ವಹಿಸಿದ ಸೂಡಿ ಜುಕ್ತಿ ಹಿರೇಮಠದ ಡಾ. ಕೊಟ್ಟೂರ ಬಸವೇಶ್ವರ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ, ಇದೊಂದು ಅವಸ್ಮರಣೀಯ ಸಮಾರಂಭ. ಜ್ಞಾನ ಕ್ರಿಯಾತ್ಮಕವಾಗಿ ವೀರಶೈವ ಧರ್ಮ ಸಕಲ ಜೀವಾತ್ಮರ ಶ್ರೇಯಸ್ಸಿಗಾಗಿ ಶ್ರಮಿಸಿದೆ. ಧರ್ಮ ಮತ್ತು ಧರ್ಮಾಚರಣೆ ತಪ್ಪಿದರೆ ಅಪಾಯ ತಪ್ಪಿದ್ದಲ್ಲ. ಅಧರ್ಮದ ವಿರುದ್ಧ ಹೋರಾಡಿ ಜಯತಂದ ಶ್ರೀ ವೀರಭದ್ರಸ್ವಾಮಿಯ ಕ್ರಿಯಾ ಕರ್ತೃತ್ವ ಶಕ್ತಿ ಅಪಾರವಾದುದು. ಶತಮಾನೋತ್ಸವ ಸಮಿತಿಯವರು ವಿಶೇಷ ಶ್ರದ್ಧಾ ಭಕ್ತಿಪೂರ್ವಕ ಸಮಾರಂಭ ಹಮ್ಮಿಕೊಂಡಿದ್ದು ಸ್ತುತ್ಯವಾದುದೆಂದರು.

ಅಡ್ನೂರಿನ ಅಭಿನವ ಪಂಚಾಕ್ಷರ ಶಿವಾಚಾರ್ಯ ಸ್ವಾಮಿಗಳು ಮತ್ತು ರಾಣೆಬೆನ್ನೂರು ಹಿರೇಮಠದ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳು ಶ್ರೀ ವೀರಭದ್ರೇಶ್ವರ ಲೀಲೆ, ಪವಾಡಗಳನ್ನು ಭಕ್ತರಿಗೆ ಮನವರಿಕೆ ಮಾಡಿಕೊಟ್ಟರು.

ಶತಮಾನೋತ್ಸವ ಸಮಿತಿ ಅಧ್ಯಕ್ಷ ರವಿಕುಮಾರ ಪಟ್ಟಣಶೆಟ್ಟರ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ದೇವಸ್ಥಾನ ಟ್ರಸ್ಟಿನ ಗಂಗಾಧರಪ್ಪ ಕೋಟಿ, ಡಾ. ಎಸ್.ಬಿ. ಶೆಟ್ಟರ್, ಕರಬಸಪ್ಪ ಹಂಚಿನಾಳ, ರವೀಂದ್ರ

> ಸತ್ಯದ ತಳಹದಿಯ ಮೇಲೆ ಆರೋಗ್ಯಪೂರ್ಣ ಸಮಾಜ ನಿರ್ಮಾಣಗೊಳ್ಳುವ ಅವಶ್ಯಕತೆಯಿದೆ. ಸಾಮಾಜಿಕ ಸಂಪ್ರದಾಯಗಳು ಬದಲಾಗಬಹುದು. ಆದರೆ ನೈತಿಕ ನಿಯಮಗಳು ಸರ್ವಕಾಲಕ್ಕೂ ಅನ್ವಯಿಸುತ್ತವೆ. ಧರ್ಮ-ಸಂಸ್ಕೃತಿ ಮತ್ತು ಪರಂಪರೆ ಉಳಿಸಿ, ಬೆಳೆಸಿಕೊಂಡು ಬರುವ ಅವಶ್ಯಕತೆಯಿದೆ. ಸಂಪತ್ತೊಂದೇ ಸುಖದ ಮೂಲವಲ್ಲ. ಅದರೊಂದಿಗೆ ಒಂದಿಷ್ಟಾದರೂ ಆಧ್ಯಾತ್ಮ ಚಿಂತನದ ಅರಿವು ಮುಖ್ಯವಾಗಿದೆ. ಭೌತಿಕ ಜೀವನ ಸಮೃದ್ಧಗೊಂಡಂತೆ ಆಂತರಿಕ ಬದುಕು ಪರಿಶುದ್ಧಗೊಳಿಸುವುದು ಮುಖ್ಯವಾಗಿದೆ ಎಂದು ಶ್ರೀ ಜಗದ್ಗುರು ರೇಣುಕಾಚಾರ್ಯರು ಸ್ಪಷ್ಟವಾಗಿ ಬೋಧಿಸಿದ್ದಾರೆ.
>
> – ಡಾ. ವೀರಸೋಮೇಶ್ವರ ಜಗದ್ಗುರುಗಳು. ಶ್ರೀ ರಂಭಾಪುರಿ ಪೀಠ, ಬಾಳೆಹೊನ್ನೂರು.

ಕಲಬುರ್ಗಿ, ಪ್ರಭುಸ್ವಾಮಿ ಸರಗಣಾಚಾರಿ, ಪ್ರಭು ಪವಾಡದ ಮೊದಲಾದ ಗಣ್ಯರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಸೇವೆ ಸಲ್ಲಿಸಿದ ಗಣ್ಯರಿಗೆ ಮತ್ತು ದಾನಿಗಳಿಗೆ ಶ್ರೀ ರಂಭಾಪುರಿ ಜಗದ್ಗುರುಗಳು ಶಾಲು ಹೊದಿಸಿ ಫಲ ಪುಷ್ಪವಿತ್ತು ಶುಭ ಹಾರೈಸಿದರು. ಚಂದ್ರು ಬಾಳಿಹಳ್ಳಿಮಠ ಪ್ರಾಸ್ತಾವಿಕವಾಗಿ ಮಾತನಾಡಿದರು. ಗಾನಭೂಷಣ ವೀರೇಶ ಕಿತ್ತೂರು ಇವರಿಂದ ಭಕ್ತಿ ಗೀತೆ ಜರುಗಿತು. ನಗರಸಭಾ ಸದಸ್ಯ ರಾಘವೇಂದ್ರ ಯಳವತ್ತಿ ನಿರೂಪಿಸಿದರು. ಇದೇ ಸಂದರ್ಭದಲ್ಲಿ ಜರುಗಿದ ಸಾಮೂಹಿಕ ವಿವಾಹದಲ್ಲಿ ಎಂಟು ಜೋಡಿಗಳು ನವ ಜೀವನಕ್ಕೆ ಕಾಲಿಟ್ಟರು.

ಮಾಸಿಕ ಋತುಸ್ರಾವ ಕುರಿತು ಜಾಗೃತಿ ಕಾರ್ಯಕ್ರಮ

■ ವಿಜಯಸಾಕ್ಷಿ ಸುದ್ದಿ, ಗದಗ

ರೋಟರಿ ಕ್ಲಬ್ ಗದಗ-ಬೆಟಗೇರಿ ವತಿಯಿಂದ ಸರ್ಕಾರಿ ಪ್ರೌಢಶಾಲೆ (ಖಒಖಂ) ಹಾತಲಗೇರಿಯಲ್ಲಿ 'ಮಾಸಿಕ ಋತು ಸ್ರಾವ (ಮುಟ್ಟಿನ) ನೈರ್ಮಲ್ಯದ ಮಹತ್ವ' ಕುರಿತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ರೊ.ಡಾ. ಕಮಲಾಕ್ಷಿ ಅಂಗಡಿ ಮಾತನಾಡಿ, ಮುಟ್ಟಿನ ನೈರ್ಮಲ್ಯವನ್ನು ನಿರ್ವಹಿಸುವಲ್ಲಿ ಹೆಣ್ಣುಮಕ್ಕಳು ಎದುರಿಸುತ್ತಿರುವ ತಾರತಮ್ಯ, ನಿಷೇಧಗಳು ಮತ್ತು ಸವಾಲುಗಳನ್ನು ತಿಳಿಸಿದರು.

ಮಾಸಿಕ ಋತುಸ್ರಾವವು ಪ್ರಾಕೃತಿಕ ಕ್ರಿಯೆಯಾಗಿದ್ದು ಹೆಣ್ಣು ಮಕ್ಕಳು ಇದರ ಬಗ್ಗೆ ಸರಿಯಾದ ಮಾಹಿತಿಯನ್ನು ತಿಳಿದುಕೊಳ್ಳುವುದು ಅವಶ್ಯವಿದೆ ಮತ್ತು ಪ್ರತಿಯೊಬ್ಬರೂ ವಯಕ್ತಿಕ ನೈರ್ಮಲ್ಯದ ವಿಧಾನಗಳು, ಪ್ಯಾಡ್‌ಗಳನ್ನು ಬದಲಾಯಿಸುವ ಆವರ್ತನ, ತೊಳೆಯುವ ತಂತ್ರಗಳು, ನೈರ್ಮಲ್ಯ ಉತ್ಪನ್ನಗಳನ್ನು ತಿರಸ್ಕರಿಸುವ ಸರಿಯಾದ ವಿಧಾನ, ದದ್ದುಗಳನ್ನು ತಪ್ಪಿಸುವುದು ಹೇಗೆ ಇತ್ಯಾದಿಗಳ ಕುರಿತು ಮಾಹಿತಿ ನೀಡಿದರು.

ವಿದ್ಯಾರ್ಥಿಗಳು ವೈದ್ಯರೊಂದಿಗೆ ತಮ್ಮಲ್ಲಿರುವ ಸಂದೇಹವನ್ನು ವ್ಯಕ್ತಪಡಿಸಿ, ಅದಕ್ಕೆ ತಕ್ಕ ಸಮಾಧಾನವನ್ನು ಪಡೆದುಕೊಂಡರು. ಕಾರ್ಯಕ್ರಮದಲ್ಲಿ ರೋಟರಿ ಸಂಸ್ಥೆಯ ವತಿಯಿಂದ ಉಚಿತವಾಗಿ ಸ್ಯಾನಿಟರಿ ಪ್ಯಾಡ್‌ಗಳನ್ನು ವಿದ್ಯಾರ್ಥಿನಿಯರಿಗೆ ನೀಡಲಾಯಿತು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷ ರೊ. ಚಂದ್ರಮೌಳಿ ಜಾಲಿ, ಕಾರ್ಯದರ್ಶಿ ರೊ. ವೀಣಾ ತಿರ್ಲಾಪೂರ, ರೊ. ಶ್ರೀಧರ ಸುಲ್ತಾನಪೂರ, ರೊ. ಶಿವಾಚಾರ್ಯ ಹೊಸಳ್ಳಿಮಠ, ಶಿಕ್ಷಕರಾದ ಗೀತಾ ಕಟಗಿ, ಸುಮಿತ್ರಾ ಮೆಸ್ತಾ, ಸಾವಿತ್ರಿ ಅವರಶೆಟ್ಟಿ, ಕೃಷ್ಣಾಸಾ ಬಾಕಳೆ, ಲಿಂಗನಗೌಡ ಪಾಟೀಲ ಮುಂತಾದವರು ಉಪಸ್ಥಿತರಿದ್ದರು.

ಡಾ.ಶಿವಕುಮಾರ ಸ್ವಾಮೀಜಿಗಳ 80ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಡಿ.ಆರ್. ಪಾಟೀಲ

ಗ್ರಾಮಗಳ ಅಭಿವೃದ್ಧಿಗೆ ಆದ್ಯತೆ ಸಿಗಲಿ

■ ವಿಜಯಸಾಕ್ಷಿ ಸುದ್ದಿ, ಗದಗ

ಸಿದ್ಧಾರೂಢರ ತತ್ವ-ಚಿಂತನೆ, ಅವರ ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಮಾಜಿ ಶಾಸಕ ಡಿ.ಆರ್. ಪಾಟೀಲ ಹೇಳಿದರು.

ರೋಣ ತಾಲೂಕಿನ ಮಲ್ಲಾಪೂರ ಗ್ರಾಮದ ಸಿದ್ಧಾರೂಢ ಮಠದ ಆವರಣದಲ್ಲಿ ಸದ್ಗುರು ಡಾ.ಶಿವಕುಮಾರ ಸ್ವಾಮೀಜಿಗಳ 80ನೇ ಜಯಂತಿಯ ಪ್ರಯುಕ್ತ ಡಾ.ಶಿವಕುಮಾರ ಸ್ವಾಮೀಜಿಗಳ ತುಲಾಭಾರ ಕಾರ್ಯಕ್ರಮ ಹಾಗೂ ಸಿದ್ಧಾರೂಢ ನಗರ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಯಾರು ಧರ್ಮವನ್ನು ರಕ್ಷಿಸುತ್ತಾರೋ ಅವರನ್ನು ಧರ್ಮವು ರಕ್ಷಿಸುತ್ತದೆ. ಮಾನವ ಜನ್ಮವನ್ನು ವ್ಯರ್ಥ ಕಾಲ ಹರಣದಲ್ಲಿ ಕಳೆಯದೇ ನಿತ್ಯ, ಜಪ, ತಪ, ದಾನ, ಧರ್ಮ, ದಾಸೋಹ, ಆಧ್ಯಾತ್ಮ ಚಿಂತನೆಗಳ ಮೂಲಕ ಭಗವಂತನ ಕೃಪೆಗೆ ಪಾತ್ರರಾಗಬೇಕು ಎಂದರು.

> ಗ್ರಾಮೀಣ ಭಾಗದಲ್ಲಿ ರಾಜಕೀಯ ನಾಯಕರು ತಮ್ಮ ಸ್ವಾರ್ಥ ಸಾಧನೆಗಾಗಿ ಜನರಲ್ಲಿ ಒಡಕು ಮೂಡಿಸುವ ಕೆಲಸವನ್ನು ಮಾಡುತ್ತಾರೆ. ಆದರೆ ಗ್ರಾಮೀಣ ಭಾಗದ ಜನರು ರಾಜಕೀಯ ವಿಷಯವನ್ನು ಚುನಾವಣೆ ಸಂದರ್ಭದಲ್ಲಿ ಮಾತ್ರ ವಿಚಾರ ಮಾಡಬೇಕು. ಗ್ರಾಮಗಳು ಅಭಿವೃದ್ಧಿಯಾಗಲು ಗ್ರಾಮೀಣ ಭಾಗದಲ್ಲಿ ಒಗ್ಗಟ್ಟು ಹಾಗೂ ಹೊಂದಾಣಿಕೆ ಅಗತ್ಯವಾಗಿದೆ. ಎಲ್ಲರೂ ಒಂದುಗೂಡಿ ಗ್ರಾಮಗಳ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಬೇಕು.
>
> – ಡಿ.ಆರ್. ಪಾಟೀಲ. ಮಾಜಿ ಶಾಸಕರು.

ಅಧ್ಯಕ್ಷತೆ ವಹಿಸಿದ್ದ ಬೈರನಹಟ್ಟಿ ದೊರೆಸ್ವಾಮಿ ವಿರಕ್ತಮಠದ ಶಾಂತಲಿಂಗ ಸ್ವಾಮೀಜಿ ಮಾತನಾಡಿ, ಗ್ರಾಮೀಣ ಭಾಗದಲ್ಲಿ ನಿರಂತರವಾಗಿ ಇಂತಹ ಧಾರ್ಮಿಕ ಕಾರ್ಯಕ್ರಮಗಳು ನಡೆಯುತ್ತಿರಬೇಕು. ಇಂದಿನ ಒತ್ತಡದ ಜೀವನದಲ್ಲಿ ಧಾರ್ಮಿಕ ಚಿಂತನೆ ಕಡಿಮೆಯಾಗುತ್ತಿದೆ ಎಂದರು.

ಸಾನ್ನಿಧ್ಯ ವಹಿಸಿದ್ದ ಬೀದರ ಚಿದಂಬರ ಆಶ್ರಮದ ಸಿದ್ಧಾರೂಢ ಮಠದ ಡಾ.ಶಿವಕುಮಾರ ಸ್ವಾಮೀಜಿ ಮಾತನಾಡಿ, ಧಾರ್ಮಿಕ ತತ್ವಗಳನ್ನು ಪಾಲನೆ ಮಾಡುವ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಇದೇ ಸಂದರ್ಭದಲ್ಲಿ ಮಲ್ಲಾಪೂರ ಗ್ರಾಮದ ಸಿದ್ಧಾರೂಢ ನಗರವನ್ನು ಉದ್ಘಾಟಿಸಲಾಯಿತು. ಪತ್ರಕರ್ತ ರವಿಕುಮಾರ ಉಳ್ಳಾಗಡ್ಡಿ, ರುದ್ರಗೌಡ ಪಾಟೀಲರನ್ನು ಸನ್ಮಾನಿಸಲಾಯಿತು. ವಿವಿಧ ಭಾಗಗಳಿಂದ ಆಗಮಿಸಿದ್ದ ಭಕ್ತರಿಗಾಗಿ ಅನ್ನ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು.

ಬೀದರ ಸಿದ್ಧಾರೂಢ ಆಶ್ರಮದ ಸಂಗೀತ ತಾಯಿಯವರು, ಗುರುಮಲ್ಲಯ್ಯ ಸ್ವಾಮೀಜಿ, ಬಸಯ್ಯ ಶಾಸ್ತ್ರೀಗಳು ಭಿಕ್ಷಾವತಿಮಠ, ಶಂಕ್ರಯ್ಯ ಹಿರೇಮಠ, ಅಶೋಕ ಸತ್ತಿಗೇರಿ, ಡಾ.ವೀರೇಶ ಸತ್ತಿಗೇರಿ, ಅಶೋಕ ಸತ್ತಿಗೇರಿ, ಜಿಲ್ಲಾ ರೈತ ಸಂಘದ ಕಾರ್ಯಾಧ್ಯಕ್ಷ ಮಹಾದೇವಗೌಡ ಪಾಟೀಲ, ಮಲ್ಲಪ್ಪ ಚಳಗೇರಿ, ರಮೇಶ ಹೂಗಾರ, ಸಂಗಪ್ಪ ಗಾರವಾಡ, ವಿಠ್ಠಲ ಸುಂಕದ, ಸಂಗಪ್ಪ ಗಾರವಾಡ ಮುಂತಾದವರಿದ್ದರು.

ಪ್ರತಿಭಾ ಕಾರಂಜಿ: ಕವಾಲಿ ಸ್ಪರ್ಧೆಯಲ್ಲಿ ಪ್ರಥಮ

■ ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಡಂಬಳ ಜಗದ್ಗುರು ತೋಂಟದಾರ್ಯ ವಿದ್ಯಾಪೀಠದ ಬಾಲಕಿಯರ ಪ್ರೌಢಶಾಲೆಯ 9ನೇ ತರಗತಿಯ ವಿದ್ಯಾರ್ಥಿನಿಯರಾದ ಸಮಲಿನ ಅತ್ತಾರ, ಪ್ರಿಯದರ್ಶಿನಿ ಯರ್ಲಗಟ್ಟಿ, ದೇವಮ್ಮ ರಾಘಣ್ಣವರ, ಜಲಜಾಕ್ಷಿ ಕಿಲಾರಿ, ರುದ್ರಮ್ಮ ಗುರುವಿನ, ಯಮುನಾಬಿ ಗೊಂಡಬಾಳ, ಭಾಗ್ಯ ರಾಘಣ್ಣವರ ತಾಲೂಕು ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಕವಾಲಿ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ವಿಜೇತ ವಿದ್ಯಾರ್ಥಿನಿಯರಿಗೆ ತರಬೇತಿ ನೀಡಿದ ಸಂಗೀತ ಶಿಕ್ಷಕರಾದ ಮೃತ್ಯುಂಜಯ ಹಿರೇಮಠ ಮತ್ತು ವಿದ್ಯಾರ್ಥಿನಿಯರನ್ನು ಸಂಸ್ಥೆಯ ಕಾರ್ಯದರ್ಶಿ ಎಸ್.ಎಸ್. ಪಟ್ಟಣಶೆಟ್ಟರ, ಮುಖ್ಯೋಪಾಧ್ಯಾಯ ಎಸ್.ಎನ್. ಕಲ್ಲಿಗನೂರು, ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

ಎಲ್‌ಪಿಜಿ ಇ-ಕೆವೈಸಿಗೆ ಗಡುವು ನಿಗದಿಯಾಗಿಲ್ಲ

■ ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಅಡುಗೆ ಅನಿಲ ಸಂಪರ್ಕ ಹೊಂದಿರುವ ಗ್ರಾಹಕರು ಆಧಾರ್ ಬಯೋಮೆಟ್ರಿಕ್ (ಇ-ಕೆವೈಸಿ) ನೀಡಲು ಕೇಂದ್ರ ಸರ್ಕಾರವು ಕೊನೆಯ ದಿನಾಂಕವನ್ನು ನಿಗದಿಪಡಿಸಿಲ್ಲ. ಜನತೆ ತಮ್ಮ ಬಿಡುವಿನ ಸಮಯದಲ್ಲಿ ಇ-ಕೆವೈಸಿ ಮಾಡಿಸಲು ಮುಂದಾಗಬೇಕು ಎಂದು ತಹಸೀಲ್ದಾರ್ ಕಿರಣಕುಮಾರ ಕುಲಕರ್ಣಿ ಹೇಳಿದರು.

ತಾಲೂಕಿನಲ್ಲಿ ಇ-ಕೆವೈಸಿ ಕುರಿತು ಗುರುವಾರ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ತಾಲೂಕಿನ ಗ್ಯಾಸ್ ಏಜನ್ಸಿಗಳ ಮುಂದೆ ನೂರಾರು ಸಂಖ್ಯೆಯಲ್ಲಿ ಮಹಿಳೆಯರು ಇ-ಕೆವೈಸಿ ಮಾಡಿಸಲು ರಾತ್ರಿಯಿಡೀ ಕಾಯುತ್ತಿರುವುದು

ಗಮನಕ್ಕೆ ಬಂದಿದೆ. ಆದರೆ ಅಡುಗೆ ಅನಿಲ ಸಂಪರ್ಕ ಹೊಂದಿರುವವರು ಇ-ಕೆವೈಸಿ ಮಾಡಿಸಲು ಕೊನೆಯ ದಿನಾಂಕವನ್ನು ಕೇಂದ್ರ ಸರ್ಕಾರ ನಿಗದಿಪಡಿಸಿಲ್ಲ. ಹೀಗಾಗಿ ಸಾರ್ವಜನಿಕರು ರಾತ್ರಿಯಿಡೀ ಗ್ಯಾಸ್ ಏಜನ್ಸಿ ಮುಂದೆ ಬಂದು ಮಲಗುವ ಕಷ್ಟವನ್ನು ತಗೆದುಕೊಳ್ಳವ ಬದಲು, ತಮ್ಮ ಬಿಡುವಿನ ವೇಳೆಯಲ್ಲಿಯೇ ಗ್ಯಾಸ್ ಏಜನ್ಸಿ ಕಚೇರಿಗಳಿಗೆ ತೆರಳಿ ಇ-ಕೆವೈಸಿ ಮಾಡಿಸಬಹುದಾಗಿದೆ.

ವಾಟ್ಸಪ್ ಮತ್ತಿತ್ತರ ಸಾಮಾಜಿಕ ಜಾಲತಾಣಗಳಲ್ಲಿ ಬರುವ ಸುದ್ದಿಗಳನ್ನು ಫಾರ್ವರ್ಡ್ ಮಾಡುವ ಮೊದಲು ತಮಗೆ ಬಂದಿರುವ ಸಂದೇಶದ ಸತ್ಯಾಸತ್ಯೆಯನ್ನು ಪರಿಶೀಲಿಸಿ ಸಂದೇಶಗಳನ್ನು ಫಾರ್ವರ್ಡ್ ಮಾಡಬೇಕು. ಇಲ್ಲದಿದ್ದರೆ ಇಂತಹ